ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ ಆಶೀರ್ವಾದಗಳೊಂದಿಗೆ

ಜೀವನದಲ್ಲಿ ವಿಜಯ ಸಾಧಿಸಬೇಕೆಂದರೆ ?

ರಚನೆ: ಬ್ರಹ್ಮವಿದ್ವರಿಷ್ಠ ತಟವರ್ತಿ ರಾಜ್ಯಲಕ್ಷ್ಮಿ

ಜೀವನದಲ್ಲಿ ವಿಜಯ ಸಾಧಿಸಬೇಕೆಂದರೆ ?

ರಚನೆ: ಬ್ರಹ್ಮವಿದ್ವರಿಷ್ಠ ತಟವರ್ತಿ ರಾಜ್ಯಲಕ್ಷ್ಮಿ

ಕನ್ನಡಕ್ಕೆ ಅನುವಾದ: ಕೆ. ಶೋಭಾಲತ ಮಲ್ಲಿಕಾರ್ಜುನ

ಪ್ರತಿಗಳು ದೊರೆಯುವ ಸ್ಥಳ

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀ ರಾಮಧಾಮ ಧ್ಯಾನ ಮಂದಿರ
ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರು– 560 066

ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

pmckannadashop.org
ಹೆಚ್ಚಿನ ಮಾಹಿತಿಗಾಗಿ **pmckannadatv.org**

JEEVANADALLI VIJAYA SADHISABEKENDARE?
Edited & Published by Sriram Publications,
Sri Ramadhama Dhyana Mandira
Narayanappa Garden, Whitefield,
Bangalore - 560066, M.: 9449695503, 8050082689

ಮೊದಲನೆಯ ಮುದ್ರಣ	:	2026
ಹಕ್ಕುಗಳು	:	ಪ್ರಕಾಶಕರು
ಪ್ರಕಾಶಕರು	:	ಶ್ರೀರಾಮ ಪಬ್ಲಿಕೇಶನ್ಸ್ ಶ್ರೀರಾಮಧಾಮ ಧ್ಯಾನ ಮಂದಿರ ನಾರಾಯಣಪ್ಪ ಗಾರ್ಡನ್ ವೈಟ್ ಫೀಲ್ಡ್ ಬೆಂಗಳೂರು–560066 ಮೊ: 9449695503
ಪ್ರತಿಗಳು	:	500
ಬೆಲೆ	:	50 ರೂ.
ಪುಟಗಳು	:	36

ತಾನು ಆತ್ಮನೆಂದು ತನ್ನಹಾಗೆ ಸರ್ವ ಜೀವಿಗಳು ಆತ್ಮಮಯವೆಂದು ಒಪ್ಪಿಕೊಳ್ಳಬೇಕೆಂದರೆ ಅಂತರಂಗದಲ್ಲಿ ವಿಶೇಷವಾದ ಜ್ಞಾನವಿರಬೇಕು. "ಬಾಹ್ಯದಲ್ಲಿ ಇರುವುದು ಅಲ್ಪ ಮಾತ್ರ ಪ್ರಾಪಂಚಿಕ ಜ್ಞಾನ. ಆತ್ಮದಲ್ಲಿ ಇರುವುದು ಅನಂತವಾದ ಶಕ್ತಿ. ಅನಂತವಾದ ಜ್ಞಾನ. ಪ್ರಾಪಂಚಿಕ ಜ್ಞಾನವನ್ನು ಹೊಂದುವುದಕ್ಕೆ ಸ್ವಲ್ಪ ಶ್ರಮಪಡಬೇಕು. ಆತ್ಮಜ್ಞಾನವನ್ನು ಹೊಂದಬೇಕೆಂದರೆ ವಿಶೇಷವಾಗಿ ಕಷ್ಟಪಡಬೇಕು.

– ಬ್ರಹ್ಮವಿದ್ವರಿಷ್ಠ ತಟವರ್ತಿ ರಾಜ್ಯಲಕ್ಷ್ಮಿ

ಜೀವನದಲ್ಲಿ ವಿಜಯ ಸಾಧಿಸಬೇಕೆಂದರೆ?

ಆಧ್ಯಾತ್ಮಿಕ ಮಾರ್ಗಕ್ಕೆ ಬಂದ ನೀವೆಲ್ಲರೂ ಪ್ರತಿದಿನ ಧ್ಯಾನ ಸಾಧನೆ ಮಾಡುತ್ತಿದ್ದೀರಿ. ಆದರೆ ನೀವು ನಿಮ್ಮ ಜೀವನದಲ್ಲಿ ವಿಜಯ ಸಾಧಿಸಬೇಕೆಂದರೆ ಕೇವಲ ಸಾಧನೆಯೊಂದೇ ಸಾಲದು, ಜ್ಞಾನವನ್ನು ಕಲಿಯಬೇಕು. ಗುರುಗಳ ಮೂಲಕ ಕೇಳಿದ ಪ್ರತಿ ವಿಷಯವನ್ನು ಆಚರಣೆಯಲ್ಲಿ ತರಬೇಕು. ಆಗಲೇ ನೀವು ಈ ಮಾರ್ಗದಲ್ಲಿ ಬೆಳೆಯುವುದಷ್ಟೇ ಅಲ್ಲದೆ, ಜೀವನದಲ್ಲಿ ವಿಜಯ ಸಾಧಿಸಲು ಸಾಧ್ಯವಾಗುತ್ತದೆ.

ಗುರುಗಳು ಹೇಳಿದ ವಿಷಯಗಳನ್ನು ಆಚರಣೆಯಲ್ಲಿ ತರಲು ಸಾಧ್ಯವಾಗದಿರುವುದಕ್ಕೆ ಕಾರಣ ನಮ್ಮ ಮನಸ್ಸು. ಆದ್ದರಿಂದ "ಶ್ವಾಸದ ಮೇಲೆ ಧ್ಯಾಸ" (ಶ್ವಾಸದ ಮೇಲೆ ಗಮನ) ಎಂಬ ಸಾಧನೆಯ ಮೂಲಕ ಮನಸ್ಸನ್ನು ಶುದ್ಧೀಕರಿಸಿಕೊಳ್ಳಬೇಕು. ನಿಮ್ಮ ಜೀವನದಲ್ಲಿ ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯವಾಗುತ್ತಿಲ್ಲವೆಂದರೆ, ನಿಮ್ಮಲ್ಲೇ ಇರುವ ಸಣ್ಣಪುಟ್ಟ ಲೋಪದೋಷಗಳೇ ಅದಕ್ಕೆ ಕಾರಣ ಎಂದು ಗಮನಿಸಿ ಅವುಗಳನ್ನು ಸರಿಪಡಿಸಿಕೊಳ್ಳಬೇಕು. ಆಗಲೇ ನೀವು ಜೀವನದಲ್ಲಿ ವಿಜಯವನ್ನು ಪಡೆದು ಅಂದುಕೊಂಡಿದ್ದನ್ನು ಸಾಧಿಸಬಹುದು. ನಿಮ್ಮಲ್ಲಿರುವ ಲೋಪದೋಷಗಳೇನು ಎಂಬುದನ್ನು ತಿಳಿಯೋಣ.

1) "ಪ್ರತಿಕ್ಷಣವೂ ನಿಮ್ಮನ್ನು ನೀವು ಗಮನಿಸಿಕೊಳ್ಳಬೇಕು": ಈ ಮಾರ್ಗಕ್ಕೆ ಬಂದು ಸಾಧನೆ ಮಾಡುತ್ತಾ, ಜ್ಞಾನವನ್ನು ಕಲಿಯುತ್ತಿದ್ದರೂ ಸಹ ಇನ್ನೂ ಕೆಲವರು ಎದುರಿಗಿರುವವರನ್ನು ವಿಮರ್ಶಿಸುವುದು, ಅವರಲ್ಲಿನ ತಪ್ಪುಗಳನ್ನು ಎತ್ತಿ ತೋರಿಸುವುದು ಮಾಡುತ್ತಿರುತ್ತಾರೆ. ಮೊದಲು ಆ ತಪ್ಪುಗಳನ್ನು ನೀವು ಮಾಡುತ್ತಿದ್ದೀರಾ? ಇಲ್ಲವೇ? ಎಂದು ನಿಮ್ಮನ್ನು ನೀವು ವಿಚಾರಿಸಿಕೊಳ್ಳಬೇಕು.

ಒಂದು ವೇಳೆ ಅಂತಹ ತಪ್ಪುಗಳನ್ನು ನೀವು ಮಾಡುತ್ತಿದ್ದರೆ, ಅವುಗಳನ್ನು ಸರಿಪಡಿಸಿಕೊಂಡು ನಂತರ ಇತರರಿಗೆ ಆ ತಪ್ಪುಗಳನ್ನು ಮಾಡಬಾರದು ಎಂದು ಹೇಳಬೇಕು. ಅಷ್ಟೇ ಹೊರತು ನೀವು ತಪ್ಪುಗಳನ್ನು ಮಾಡುತ್ತಾ ಇತರರಿಗೆ (ಹೇಳಬಾರದು) ಬುದ್ಧಿ ಹೇಳಬಾರದು. ನೀವು ತ್ರಿಕರಣ ಶುದ್ಧಿಯಿಂದ ಅಂದರೆ ಮೊದಲು ನೀವು ತಪ್ಪು ಮಾಡದೆ ಎದುರಿಗಿರುವವರಿಗೆ ಹೇಳಿದರೆ ಪ್ರಕೃತಿಯು ಅದನ್ನು ಸ್ವೀಕರಿಸುತ್ತದೆ. ಆದರೆ ನೀವು ತಪ್ಪುಗಳನ್ನು ಮಾಡುತ್ತಾ ಸಲಹೆಗಳನ್ನು ನೀಡಿದರೆ ಪ್ರಕೃತಿಯು ಅದನ್ನು ಸ್ವೀಕರಿಸುವುದಿಲ್ಲ. ಅದಕ್ಕಾಗಿಯೇ ಯಾರಿಗಾದರೂ ಸಲಹೆ ನೀಡುವಾಗ ಅದನ್ನು ನಾವು ಪಾಲಿಸುತ್ತಿದ್ದೇವೆಯೇ? ಇಲ್ಲವೇ? ಎಂದು ನಿಮ್ಮನ್ನು ನೀವೇ ಗಮನಿಸಿಕೊಳ್ಳಬೇಕು.

ಒಮ್ಮೆ ರಾಮಕೃಷ್ಣ ಪರಮಹಂಸರ ಬಳಿಗೆ ಒಬ್ಬ ಮಹಿಳೆ ತನ್ನ ಮಗನನ್ನು

ಕರೆದುಕೊಂಡು ಬಂದು, "ಗುರುಗಳೇ, ನನ್ನ ಮಗ ಸಿಹಿ ಪದಾರ್ಥಗಳನ್ನು ಅತಿಯಾಗಿ ತಿನ್ನುತ್ತಿದ್ದಾನೆ. ತಿನ್ನಬೇಡ ಎಂದು ನಾನು ಎಷ್ಟು ಹೇಳಿದರೂ ಅವನು ಕೇಳುತ್ತಿಲ್ಲ. ಅವನಿಂದ ಸಿಹಿ ತಿನ್ನುವುದನ್ನು ಬಿಡಿಸುವ ಮಾರ್ಗವನ್ನು ದಯವಿಟ್ಟು ತಿಳಿಸಿ" ಎಂದು ಕೇಳಿಕೊಂಡಳು. ಆಗ ರಾಮಕೃಷ್ಣ ಪರಮಹಂಸರು "ಒಂದು ವಾರದ ನಂತರ ಮಗನನ್ನು ಕರೆದುಕೊಂಡು ಬಾ, ಆಗ ಹೇಳುತ್ತೇನೆ" ಎಂದರು. ಒಂದು ವಾರದ ನಂತರ ಆ ತಾಯಿ ಮಗನನ್ನು ಕರೆದುಕೊಂಡು ಬಂದಾಗ, ಪರಮಹಂಸರು ಆ ಹುಡುಗನಿಗೆ "ಸಿಹಿ ಪದಾರ್ಥಗಳನ್ನು ಹೆಚ್ಚಾಗಿ ತಿನ್ನಬೇಡ, ತಿಂದರೆ ನಿನ್ನ ಹಲ್ಲುಗಳು ಹಾಳಾಗುತ್ತವೆ" ಎಂದು ಹೇಳಿದರು.

ಆಗ ಆ ತಾಯಿ, "ಗುರುಗಳೇ, ಈ ಮಾತನ್ನು ಅಂದೇ ಹೇಳಿದ್ದರೆ ಇಷ್ಟು ದೂರ ಮತ್ತೆ ಬರುವ ಅವಶ್ಯಕತೆ ಇರುತ್ತಿರಲಿಲ್ಲವಲ್ಲ?" ಎಂದಳು. ಅದಕ್ಕೆ ರಾಮಕೃಷ್ಣ ಪರಮಹಂಸರು "ನನಗೂ ಸಿಹಿ ಎಂದರೆ ತುಂಬಾ ಇಷ್ಟ. ನಾನು ತಿನ್ನುವುದನ್ನು ಬಿಟ್ಟರೆ ತಾನೇ ನಿಮ್ಮ ಮಗನಿಗೆ ಹೇಳಲು ಸಾಧ್ಯ? ಅದಕ್ಕಾಗಿಯೇ ನಾನು ಒಂದು ವಾರ ಸಮಯ ಕೇಳಿದೆ. ಈ ಒಂದು ವಾರದಲ್ಲಿ ನಾನು ಸಿಹಿ ತಿನ್ನುವುದನ್ನು ಬಿಟ್ಟಿದ್ದೇನೆ, ಹಾಗಾಗಿ ಈಗ ಅವನಿಗೆ ಹೇಳುವ ಅರ್ಹತೆ ನನಗಿದೆ" ಎಂದರು. ಇದರಿಂದ ನಾವು ತಿಳಿದುಕೊಳ್ಳಬೇಕಾದ ಅಂಶವೇನೆಂದರೆ, ಮಹಾಪುರುಷರೆಲ್ಲರೂ ತಾವು ಮೊದಲು ಆಚರಿಸಿ ಆನಂತರ ನಮಗೆ ಬೋಧಿಸುತ್ತಾರೆ ಎಂದು ತಿಳಿದುಕೊಳ್ಳಬೇಕು.

2) "ನಮ್ಮ ಜೀವನದಲ್ಲಿ ಏನೇ ಸಂಭವಿಸಿದರೂ ಸ್ವೀಕರಿಸಬೇಕು:" ಕೆಲವರು ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯವಾಗದಿದ್ದಾಗ ತುಂಬಾ ಸಂಕಟಪಡುತ್ತಾರೆ. ಮಕ್ಕಳಿಗೆ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬಂದರೆ ಅವರನ್ನು ದಂಡಿಸುತ್ತಾರೆ. ಈ ವಿಷಯದ ಬಗ್ಗೆ ಪತ್ರಿಜಿಯವರು ನಮಗೊಂದು ಮಾತು ಹೇಳಿದ್ದಾರೆ.

"ನಿಮ್ಮ ಮಕ್ಕಳಿಗೆ ಪರೀಕ್ಷೆಯಲ್ಲಿ 20 ಅಂಕಗಳು ಬಂದಿವೆ ಎಂದುಕೊಳ್ಳಿ. ಅವರನ್ನು ಬೈಯುವ ಬದಲು, ನೀನು ಓದಿದ್ದಕ್ಕೆ ತಕ್ಕಂತೆ 20 ಅಂಕಗಳು ಬಂದಿವೆ, ಇನ್ನೂ ಸ್ವಲ್ಪ ಕಷ್ಟಪಟ್ಟು ಓದಿದರೆ 60 ಅಂಕಗಳನ್ನು ಪಡೆಯಬಹುದು ಎಂದು ಹೇಳಿ ಅವರನ್ನು ಪ್ರೋತ್ಸಾಹಿಸಬೇಕು."ಎಂದು ತಿಳಿಸಿದ್ದಾರೆ. ಅವನು ಅದನ್ನು ಅರ್ಥಮಾಡಿಕೊಂಡು ಈ ಬಾರಿ ಇನ್ನೂ ಹೆಚ್ಚು ಅಂಕಗಳನ್ನು ಪಡೆಯುತ್ತಾನೆ ಅಷ್ಟೇ ಹೊರತು ಅವನನ್ನು ನಿರುತ್ಸಾಹಗೊಳಿಸಬಾರದು. ನಿಮ್ಮ ಜೀವನದಲ್ಲಿ ಏನು ನಡೆಯುತ್ತಿದ್ದರೂ ಅದನ್ನು ಅಂಗೀಕರಿಸುತ್ತಾ ಬೆಳೆಯಬೇಕು. ಒಂದು ಬಾರಿ ವಿಫಲವಾದರೂ ಮತ್ತೆ ಪ್ರಯತ್ನಿಸಿದರೆ ಯಶಸ್ವಿಯಾಗುತ್ತೀರಿ, ಅಷ್ಟೇ ಹೊರತು ದುಃಖಿಸುತ್ತಾ ಕುಳಿತುಕೊಳ್ಳಬಾರದು.

3) "ಯಶಸ್ಸಿನ ಮೊದಲ ಮೆಟ್ಟಿಲು ಸೋಲೇ ಎಂದು ನೆನಪಿಟ್ಟುಕೊಂಡು, ಸೋಲಿಗೆ ಹೆದರದೆ ಮುಂದೆ ಸಾಗಿದರೆ ವಿಜಯ ನಿಮ್ಮದೇ ಎಂದು ನೆನಪಿಡಿ.": ನನ್ನ ಜೀವನದಲ್ಲಿ ಯಶಸ್ಸಿಗೆ ಮತ್ತು ಅಪಜಯಕ್ಕೆ ನಾನೇ ಕಾರಣ ಎಂದು ತಿಳಿದುಕೊಂಡು ಸಮಚಿತ್ತದಲ್ಲಿ ಇರಲು ಕಲಿಯಬೇಕು. ಸೋಲು ಉಂಟಾದಾಗ ಅವರ ಕಾರಣದಿಂದ, ಇವರ ಕಾರಣದಿಂದ ಹೀಗಾಯಿತು ಎಂದು ಇತರರನ್ನು ದೂಷಿಸಬಾರದು. ಎಲ್ಲಿ ಲೋಪವಾಯಿತು ಎಂದು ಆತ್ಮವಿಮರ್ಶೆ ಮಾಡಿಕೊಳ್ಳುತ್ತಾ ಮುಂದೆ ಸಾಗಬೇಕು. ನೀವು ಮಾಡುವ ಕೆಲಸದಲ್ಲಿ ಶ್ರದ್ಧೆ, ಪಟ್ಟುಬಿಡದ ಪ್ರಯತ್ನ ಮತ್ತು ಕಠಿಣ ಪರಿಶ್ರಮವಿದ್ದರೆ ಯಶಸ್ಸು ನಿಮ್ಮನ್ನು ಹುಡುಕಿಕೊಂಡು ಬರುತ್ತದೆ ಎಂದು ನೆನಪಿಟ್ಟುಕೊಳ್ಳಬೇಕು.

ನಾನು ಕಲೆಕ್ಟರ್ ಆಗಬೇಕೆಂದುಕೊಂಡರೆ ಕಲೆಕ್ಟರ್ ಆಗುವುದಿಲ್ಲವಲ್ಲ? ಅದಕ್ಕೆ ತಕ್ಕ ಶ್ರಮ ಇರಬೇಕು. ಕೆಲವರು ದೇವರಿಗೆ ಮೊರೆ ಹೋಗಿ, ದೇವರ ಮೇಲೆ ಭಾರ ಹಾಕಿ, ಆ ದೇವರ ದಯೆಯಿಂದ ತಾವು ಅಂದುಕೊಂಡ ಕೆಲಸಗಳು ಪೂರ್ಣಗೊಳ್ಳುತ್ತವೆ ಎಂದು ಭಾವಿಸುತ್ತಾರೆ. ನಿಮ್ಮ ಶ್ರಮ ಮತ್ತು ಪಟ್ಟುಬಿಡದ ಪ್ರಯತ್ನವಿಲ್ಲದೆ ನೀವು ಯಾವುದೇ ಕೆಲಸದಲ್ಲಿ ಯಶಸ್ವಿಯಾಗಲು ಸಾಧ್ಯವಿಲ್ಲ. ನಿಮ್ಮ ಜೀವನದಲ್ಲಿ ನಡೆಯುವ ಪ್ರತಿಯೊಂದು ಘಟನೆಗೆ ನೀವೇ ಜವಾಬ್ದಾರರು. ಯಾರಿಂದಲೂ ಏನನ್ನೂ ಸಾಧಿಸಲು ಸಾಧ್ಯವಿಲ್ಲ, ನಿಮ್ಮ ಯಶಸ್ಸಿಗೆ ನೀವೇ ಕಾರಣ.

4) "ದ್ವೇಷ, ಅಸೂಯೆ, ಹಗೆ ಮತ್ತು ಪ್ರತಿಕಾರ ಎಂಬವು ಜೀವನದಲ್ಲಿ ಇರಬಾರದು:"

▸ **ದ್ವೇಷ:** ಯಾರಾದರೂ ನಿಮ್ಮನ್ನು ದ್ವೇಷಿಸಿದರೆ, **"ಹಿಂದೆ ನಾನು ಅಹಂಕಾರದಿಂದ ಅವರಿಗೆ ಯಾವುದೋ ಅಪಕಾರ ಮಾಡಿರಬಹುದು, ಅದಕ್ಕೇ ಅವರು ನನ್ನನ್ನು ದ್ವೇಷಿಸುತ್ತಿದ್ದಾರೆ"** ಎಂದು ಮೌನವಾಗಿರಬೇಕು. ಹಾಗೆ ಮಾಡದೆ ಅವರ ಬಗ್ಗೆ ಹತ್ತು ಜನರಿಗೆ ಪದೇ ಪದೇ ಹೇಳುತ್ತಿದ್ದರೆ ನಿಮಗೆ ಸಾಧನೆ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ನಿಮ್ಮಲ್ಲಿ ನಕಾರಾತ್ಮಕ ಆಲೋಚನೆಗಳು ಹೆಚ್ಚಾಗುತ್ತವೆ. ಅದಕ್ಕಾಗಿಯೇ ಅಂತಹವರನ್ನು ಕ್ಷಮಿಸಿ ಬಿಟ್ಟುಬಿಡಬೇಕು. ಈ ಸೃಷ್ಟಿಯಲ್ಲಿ ಕ್ಷಮೆಗಿಂತ ಮಿಗಿಲಾದದ್ದು ಯಾವುದೂ ಇಲ್ಲ. ಗುಣವಿಲ್ಲದ ಅಂತಹ ವ್ಯಕ್ತಿಗಳನ್ನು ನೀವು ಬಿಟ್ಟುಬಿಟ್ಟರೆ, ನಿಮ್ಮ ಸಾಧನೆ ಚೆನ್ನಾಗಿ ಸಾಗುತ್ತದೆ ಮತ್ತು ಕರ್ಮಗಳು ಹೆಚ್ಚಾಗುವುದಿಲ್ಲ.

▸ **ಅಸೂಯೆ:** ನಿಮಗಿಂತ ಉನ್ನತವಾಗಿ ಬೆಳೆದವರನ್ನು ನೋಡಿ ಅಸೂಯೆ ಪಡಬಾರದು. ಅವರ ಪೂರ್ವ ಜನ್ಮದ ಪುಣ್ಯದ ಫಲವಾಗಿ ಅವರು ಹಾಗಿದ್ದಾರೆ ಎಂದು ಅಂದುಕೊಳ್ಳಬೇಕು. ಅವರ ಮೇಲೆ ಅಸೂಯೆ ಪಡುವುದರಿಂದ ನನಗೆ ಯಾವುದೇ ಪ್ರಯೋಜನವಿಲ್ಲ ಎಂದು ತಿಳಿದುಕೊಳ್ಳಬೇಕು. ಹಗೆ, ಪ್ರತೀಕಾರ: ಕೆಲವರು "ನನಗೆ ಅವನಿಂದ ಅನ್ಯಾಯವಾಗಿದೆ" ಎಂದು ಎದುರಾಳಿಯ ಮೇಲೆ

ಹಗೆಯಿಂದ ಉರಿಯುತ್ತಿರುತ್ತಾರೆ. ಆದರೆ ಅವರೂ ಕೂಡ ಆತ್ಮಸ್ವರೂಪರೆಂದು ಕ್ಷಮಿಸಿ ಬಿಟ್ಟುಬಿಡಬೇಕು. ಅದುವೇ ಜ್ಞಾನಿಯ ಲಕ್ಷಣ. ಇನ್ನು ಕೆಲವರು ಎದುರಾಳಿಯ ಮೇಲೆ ಸೇಡು ತೀರಿಸಿಕೊಳ್ಳಲು ನೋಡುತ್ತಾರೆ. ಎದುರಾಳಿಯಿಂದ ಕಷ್ಟ ಬಂದಿದೆ ಎಂದು ಅವರ ಮೇಲೆ ಸೇಡು ತೀರಿಸಿಕೊಳ್ಳಲು ಹೋದರೆ, ಆ ಕೆಲಸದಿಂದ ನೀವು ಕರ್ಮಗಳನ್ನು ಮೈಮೇಲೆ ಎಳೆದುಕೊಳ್ಳುತ್ತೀರಿ. ಜ್ಞಾನಿಯು ತನಗೆ ಅನ್ಯಾಯ ಮಾಡಿದವರನ್ನೂ ಕೂಡ ಕ್ಷಮಿಸಿ ಬಿಟ್ಟುಬಿಡುತ್ತಾನೆ.

ಅದಕ್ಕಾಗಿಯೇ ದ್ವೇಷ, ಅಸೂಯೆ, ಹಗೆ ಮತ್ತು ಪ್ರತೀಕಾರ – ಇವೆಲ್ಲವೂ ವಿಜಯಕ್ಕೆ ಶತ್ರುಗಳು. ಆದ್ದರಿಂದ ನಿಮ್ಮನ್ನು ದ್ವೇಷಿಸುವವರನ್ನು ಕ್ಷಮಿಸಿ, ನಿಮ್ಮ ಮೇಲೆ ಅಸೂಯೆ ಪಡುವವರನ್ನು ಮತ್ತು ಸೇಡು ತೀರಿಸಿಕೊಳ್ಳುವವರನ್ನು ನಿರ್ಲಕ್ಷಿಸಿ ಬಿಟ್ಟುಬಿಡಬೇಕು. ಈ ನಾಲ್ಕು ಗುಣಗಳನ್ನು ಬಿಟ್ಟಾಗ ನೀವು ದೈವ ಗುಣವನ್ನು ಹೊಂದುತ್ತೀರಿ ಮತ್ತು ವಿಜಯವು ನಿಮ್ಮನ್ನು ಹುಡುಕಿಕೊಂಡು ಬರುತ್ತದೆ.

5) "ಭಗವಂತನು ನಮ್ಮ ಕೈಯಿಂದ ದೊಡ್ಡ ಕೆಲಸವನ್ನು ಮಾಡಿಸಬೇಕೆಂದು ಅಂದುಕೊಂಡರೆ, ಮೊದಲು ಸಣ್ಣ ಸಣ್ಣ ಕೆಲಸಗಳನ್ನು ನಮಗೆ ನೀಡುತ್ತಾನೆ. ಅವು ಕೇವಲ ಸಣ್ಣ ಕೆಲಸಗಳಲ್ಲವೇ! ಎಂದು ನೀವು ನಿರ್ಲಕ್ಷ್ಯದಿಂದ ಬಿಟ್ಟುಬಿಟ್ಟರೆ, ದೊಡ್ಡ ಕೆಲಸಗಳನ್ನು ಮಾಡುವ ಅವಕಾಶ ನಿಮಗೆ ಬರುವುದಿಲ್ಲ.": ಸಣ್ಣ ಕೆಲಸಗಳನ್ನು ಶ್ರದ್ಧೆಯಿಂದ, ಪಟ್ಟುಹಿಡಿದು ಮಾಡಿ ಅವುಗಳಲ್ಲಿ ವಿಜಯ ಸಾಧಿಸಿದಾಗ, ಭಗವಂತನು ನಿಮಗೆ ದೊಡ್ಡ ಕೆಲಸಗಳನ್ನು ಮಾಡುವ ಅವಕಾಶ ನೀಡುತ್ತಾನೆ. ಹತ್ತನೇ ತರಗತಿ (Tenth) ಪಾಸಾಗದಿದ್ದರೆ ಕಾಲೇಜಿನಲ್ಲಿ ಹೇಗೆ ಓದಲು ಸಾಧ್ಯ? ಅದಕ್ಕಾಗಿಯೇ ಸಣ್ಣ ಕೆಲಸಗಳೆಂದು ಅಸಡ್ಡೆ ಮಾಡದೆ, ಅವುಗಳನ್ನು ಶ್ರದ್ಧೆಯಿಂದ ಮಾಡಿ ಜಯಿಸಿದರೆ, ದೊಡ್ಡ ಕೆಲಸಗಳು ನಿಮ್ಮ ಮುಂದೆ ಬಂದಾಗ ಅವುಗಳನ್ನು ಸುಲಭವಾಗಿ ನಿಭಾಯಿಸಬಹುದು. ನೀವು ಇವುಗಳನ್ನು ಸುಲಭವಾಗಿ ಮಾಡಬಹುದು. ಕೇವಲ ಆಸೆಗಳು ಮತ್ತು ಸಂಕಲ್ಪಗಳಿದ್ದರೆ ಸಾಲದು, ಅವುಗಳಿಗೆ ತಕ್ಕಂತೆ ಛಲ ಮತ್ತು ಪರಿಶ್ರಮ ಇರಬೇಕು. ಯಾವುದೇ ಕೆಲಸದಲ್ಲಿ ಯಶಸ್ಸು ಸಿಗಬೇಕಾದರೆ ಎಷ್ಟೋ ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ. ಈ ಹಾದಿಯಲ್ಲಿ ನಿಮಗೆ ಬರುವ ಕಷ್ಟಗಳು ಮತ್ತು ನೋವುಗಳು ದೇವರು ನೀಡುವ ಪರೀಕ್ಷೆಗಳೆಂದು ತಿಳಿದು, ಸಣ್ಣ ಸಣ್ಣ ತ್ಯಾಗಗಳನ್ನು ಮಾಡಿದರೆ ನೀವು ಯಾವಾಗಲೂ ಆನಂದದ ಸ್ಥಿತಿಯಲ್ಲಿರುತ್ತೀರಿ. "ದೇವರನ್ನು ಪಡೆಯಬೇಕು, ಆ ಸತ್ಯಲೋಕವನ್ನು ತಲುಪಬೇಕು" ಎಂಬ ದೊಡ್ಡ ದೊಡ್ಡ ಸಂಕಲ್ಪಗಳು ಇರಲಿ, ಆದರೆ ಅವು ನೆರವೇರಬೇಕಾದರೆ ಜೀವನದಲ್ಲಿ ಎದುರಾಗುವ ಸಣ್ಣಪುಟ್ಟ ಅಡೆತಡೆಗಳನ್ನು ಎದುರಿಸುತ್ತಾ, ಕಷ್ಟಗಳನ್ನು ಸಹಿಸಿಕೊಳ್ಳುತ್ತಾ, ತಾಳ್ಮೆಯಿಂದ ಇರಬೇಕು. ಆಗ ವಿಜಯವು ನಿಮ್ಮನ್ನು ವರಿಸುತ್ತದೆ.

▶ **ಆತ್ಮಾವಲೋಕನ**

ಇತರರನ್ನು ವಿಮರ್ಶಿಸುವ ಮೊದಲು ನಿಮ್ಮನ್ನು ನೀವು ಗಮನಿಸಿಕೊಳ್ಳಿ. "ಇಂತಹ ತಪ್ಪುಗಳನ್ನು ನಾನೂ ಮಾಡುತ್ತಿದ್ದೇನೆಯೇ?" ಎಂದು ಗಮನಿಸಿ, ವಿಚಾರ ಮಾಡಿ, ಆ ತಪ್ಪುಗಳನ್ನು ಮರಳಿ ಮಾಡದಿದ್ದರೆ ನಿಮ್ಮ ಜೀವನದಲ್ಲಿ ನೀವು ವಿಜಯ ಸಾಧಿಸುತ್ತೀರಿ. ಜೀವನದಲ್ಲಿ ಯಾವುದು ಬರುತ್ತಿದೆಯೋ, ಯಾವುದು ಹೋಗುತ್ತಿದೆಯೋ, ಏನೇ ನಡೆಯುತ್ತಿದ್ದರೂ ಅದನ್ನು ಸ್ವೀಕರಿಸುವ ಶಕ್ತಿಯನ್ನು ನೀವು ಹೊಂದಿರಬೇಕು.

ನಿಮ್ಮ ಜೀವನಕ್ಕೆ ನೀವೇ ಶಿಲ್ಪಿ

ನಿಮ್ಮ ಜೀವನದ ಸೃಷ್ಟಿಕರ್ತರು ನೀವೇ. ನಿಮ್ಮ ಜೀವನದಲ್ಲಿ ನಡೆಯುವ ಯಶಸ್ಸಿಗಾಗಲಿ ಅಥವಾ ಅಪಜಯಕ್ಕಾಗಲಿ ನೀವೇ ಕಾರಣವೇ ಹೊರತು ಬೇರೆಯವರಲ್ಲ ಎಂದು ತಿಳಿದುಕೊಳ್ಳಿ. ಇತರರ ಮೇಲಿನ ದ್ವೇಷ, ಅಸೂಯೆ, ಹಗೆತನ ಮತ್ತು ಪ್ರತೀಕಾರದ ಭಾವನೆಗಳನ್ನು ಬಿಡಬೇಕು. ಈ ನಾಲ್ಕು ಗುಣಗಳು ಯಶಸ್ಸು ಸಾಧಿಸಲು ಪರಮ ಶತ್ರುಗಳು. ಸಣ್ಣ ಸಣ್ಣ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿದಾಗ ಮಾತ್ರ ದೊಡ್ಡ ಕೆಲಸಗಳನ್ನು ಮಾಡುವ ಅವಕಾಶ ಸಿಗುತ್ತದೆ. ನಿಮ್ಮ ಸಂಕಲ್ಪ ಎಷ್ಟು ದೊಡ್ಡದೋ, ನಿಮ್ಮ ಪರಿಶ್ರಮ ಮತ್ತು ಛಲ ಕೂಡ ಅಷ್ಟೇ ಇರಬೇಕು. ಬರುವ ಅಡೆತಡೆಗಳನ್ನು ಎದುರಿಸಬೇಕು ಮತ್ತು ಸಣ್ಣ ತ್ಯಾಗಗಳನ್ನು ಮಾಡಬೇಕು. ಉದಾಹರಣೆಗೆ, ಒಂದು ಬೀಜವನ್ನು ಭೂಮಿಯಲ್ಲಿ ಬಿತ್ತಿದಾಗ ಅದು ಮಹಾವೃಕ್ಷವಾಗಬೇಕಾದರೆ, ಮೊದಲು ಆ ಬೀಜ ತನ್ನ ಅಸ್ತಿತ್ವವನ್ನು ತ್ಯಾಗ ಮಾಡಬೇಕು. ಭೂಮಿಯಲ್ಲಿ ಬೀಜವನ್ನು ಬಿತ್ತಿ ನೀರು ಹಾಕಿದಾಗ, ಕೆಲವು ದಿನಗಳ ನಂತರ ಆ ಬೀಜವು ಎರಡಾಗಿ ಸೀಳಿ ಅದರೊಳಗಿನ ಅಂಕುರವು ಮೊಳಕೆಯೊಡೆಯುತ್ತದೆ. ಆ ಮೊಳಕೆಯು ಮಹಾ ವೃಕ್ಷವಾಗಿ ಬದಲಾಗುತ್ತದೆ.

ಆ ಬೀಜದಂತೆಯೇ ನೀವು ನಿಮ್ಮ ಜೀವನದಲ್ಲಿ ಸಣ್ಣ ಸಣ್ಣ ತ್ಯಾಗಗಳನ್ನು ಮಾಡದಿದ್ದರೆ ಮಹಾವೃಕ್ಷದಂತಹ ಶಾಶ್ವತವಾದ ಫಲವನ್ನು ಪಡೆಯಲಾರಿರಿ. ಜೀವಿಯಾಗಿ ಸತ್ತರೂ ದೇವರಾಗಿ ಬದಲಾಗಬೇಕು. ಅಂದರೆ ಕೇವಲ ಶರೀರವೇ ನಾನು ಎಂದುಕೊಳ್ಳದೆ ಆತ್ಮವೇ ನಾನು ಎಂದು, ಎಲ್ಲರೂ ಆತ್ಮಗಳೇ ಎಂದು ತಿಳಿದುಕೊಂಡು ಜೀವಿಸಬೇಕು. ಜೀವಿಯಾಗಿ ಸಾಯುವುದು ಎಂದರೆ ಶರೀರ ಇಲ್ಲದಿರುವುದು ಎಂದಲ್ಲ, ಮನಸ್ಸಿಲ್ಲದಂತೆ ಮಾಡಿಕೊಳ್ಳುವುದು; ಅಂತಹವರೇ ಮಹಾತ್ಮರು. ಮಹಾತ್ಮರು ತ್ಯಾಗ ಬುದ್ಧಿಯನ್ನು ಬೆಳೆಸಿಕೊಂಡರೆ ಮಾಧವರಾಗಿ (ದೈವಸ್ವರೂಪಿಗಳಾಗಿ) ಬದಲಾಗುತ್ತಾರೆ. ಅಂತಹವರಿಗೆ ಶತ್ರುಗಳಿಗೂ ಕೂಡ ಸಹಾಯ ಮಾಡುವ ಶಕ್ತಿ, ತಾಳ್ಮೆ ಮತ್ತು ತ್ಯಾಗ ಗುಣಗಳು ಬರುತ್ತವೆ. ಅದಕ್ಕಾಗಿಯೇ

ಜೀವಿಯಾಗಿರುವವನು ದೇವರಾಗಿ ಬೆಳೆಯಬೇಕು. ಹಾಗೆ ಬೆಳೆದವರು ಸ್ವಾರ್ಥವಿಲ್ಲದೆ ತ್ಯಾಗ ಬುದ್ಧಿಯನ್ನು ಹೊಂದಿರುತ್ತಾರೆ, ಬಂಧನಗಳಿಗೆ ಅತೀತವಾಗಿ ಬದುಕುತ್ತಾರೆ. ಅವರು ತಮ್ಮ ಶ್ರಮವನ್ನಾಗಲಿ, ಶಕ್ತಿಯನ್ನಾಗಲಿ ಅಥವಾ ಧನವನ್ನಾಗಲಿ ಇತರರ ಆತ್ಮದ ಬೆಳವಣಿಗೆಗಾಗಿ ಖರ್ಚು ಮಾಡುತ್ತಾರೆ.

ಶಂಕರಾಚಾರ್ಯರು, ಬುದ್ಧರು ಜ್ಞಾನ ಪ್ರಚಾರ ಮಾಡುವ ಸಮಯದಲ್ಲಿ ಎಷ್ಟೋ ಮೈಲುಗಳ ಕಾಲ ನಡಿಗೆಯ ಮೂಲಕ ಸಂಚರಿಸಿ ಪ್ರಚಾರ ಮಾಡಿದರು. ಎಲ್ಲರಲ್ಲಿನ ಅಜ್ಞಾನವನ್ನು ಹೋಗಲಾಡಿಸಿ ಜ್ಞಾನವನ್ನು ಕಲಿಸಬೇಕು, ಅವರಲ್ಲಿರುವ ದುಃಖವನ್ನು ತೊಲಗಿಸಬೇಕು ಮತ್ತು ಅವರನ್ನು ಜ್ಞಾನವಂತರನ್ನಾಗಿ ಮಾಡಬೇಕು ಎಂಬ ಸಂಕಲ್ಪದಿಂದ ಎಷ್ಟೋ ತ್ಯಾಗಗಳನ್ನು ಮಾಡಿದರು.

ನೀವೆಲ್ಲರೂ ಕೂಡ ಎಲ್ಲಾ ಕಡೆ ಸಂಚರಿಸುತ್ತಾ ಜ್ಞಾನ ಪ್ರಚಾರ ಮಾಡಬೇಕು, ಎಲ್ಲರಿಗೂ ಜ್ಞಾನವನ್ನು ಬೋಧಿಸಬೇಕು. ನಿಮ್ಮಲ್ಲಿ ಕೆಲವರು "ನಮ್ಮ ಪತಿಯಂದಿರು ಹೊರಗೆ ಹೋಗಲು ಒಪ್ಪುವುದಿಲ್ಲ" ಎಂದು ಹೇಳಬಹುದು, ಆದರೆ ನೀವು ತೀವ್ರ ಸಾಧನೆ ಮಾಡಿದರೆ ಪ್ರಕೃತಿಯೇ ನಿಮಗೆ ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಜೀವನದಲ್ಲಿ ವಿಜಯ ಸಾಧಿಸುವುದು ಎಂದರೆ ಧ್ಯಾನ ಮಾಡುವುದು ಮತ್ತು ಜ್ಞಾನವನ್ನು ಬೆಳೆಸಿಕೊಳ್ಳುವುದು. ಅದಕ್ಕಾಗಿಯೇ ರಾಘವರಾವ್ ಅವರು ನಿಮ್ಮನ್ನು ವಿಜಯದ ಹತ್ತಿರಕ್ಕೆ ಕೊಂಡೊಯ್ಯಲು ನಿಮಗಾಗಿ ತರತರವಾದ (ವಿವಿಧ ರೀತಿಯ) ಪರೀಕ್ಷೆಗಳನ್ನು ಒಡ್ಡುತ್ತಾರೆ. ಮಾಡುತ್ತಿರುತ್ತಾರೆ. ತಕ್ಷಣವೇ (On the spot) ಪಾಠ ಮಾಡಲು ಹೇಳುತ್ತಾರೆ, ನೋಡದೆಯೇ ಹೇಳಲು ಹೇಳುತ್ತಾರೆ, ಇದೆಲ್ಲವೂ ನಿಮ್ಮ ಬೆಳವಣಿಗೆಗಾಗಿ ಮಾತ್ರ.

'ನನ್ನ ಜೀವನಕ್ಕೆ ನಾನೇ ಸೃಷ್ಟಿಕರ್ತ' ಎಂದು ಜೀವನದಲ್ಲಿ ಏನೇ ಸಂಭವಿಸಿದರೂ ಅದನ್ನು ಸ್ವೀಕರಿಸಲು ಸಾಧ್ಯವಾಗಬೇಕು. ಯಾರ ಮೇಲೂ ದ್ವೇಷ, ಅಸೂಯೆ, ಹಗೆತನ ಅಥವಾ ಸೇಡಿನ ಭಾವನೆ ಇರಬಾರದು. ಎಲ್ಲರೂ ಆತ್ಮಗಳೇ ಎಂಬ ಭಾವನೆ ನಿಮ್ಮ ಹೃದಯದಲ್ಲಿ ಆಳವಾಗಿ ಬೇರೂರಬೇಕು. ಸಣ್ಣ ಸಣ್ಣ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿದರೆ, ದೊಡ್ಡ ದೊಡ್ಡ ಕಾರ್ಯಗಳು ತಾವಾಗಿಯೇ ಒದಗಿ ಬರುತ್ತವೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ನಿಮ್ಮ ಸಂಕಲ್ಪ ಎಷ್ಟು ದೊಡ್ಡದೋ, ನಿಮ್ಮ ಶ್ರಮ, ಪಟ್ಟು ಮತ್ತು ಪ್ರಯತ್ನ ಕೂಡ ಅದೇ ಮಟ್ಟದಲ್ಲಿ ಇರಬೇಕು. ವಿಜಯಕ್ಕಾಗಿ ಎಷ್ಟೋ ತ್ಯಾಗಗಳನ್ನು ಮಾಡಬೇಕಾಗುತ್ತದೆ ಮತ್ತು ಆ ಹಾದಿಯಲ್ಲಿ ಅನೇಕ ಅಡೆತಡೆಗಳು ಬರುತ್ತವೆ ಎಂಬುದನ್ನು ಗಮನಿಸಬೇಕು.

ಕೊನೆಯದಾಗಿ, ಗುರುವಿನ ಮಾತಿನ ಮೇಲೆ ಶ್ರದ್ಧೆ ಇರುವವರು, ಗುರುಗಳು ಹೇಳಿದ ವಿಷಯಗಳನ್ನು ಆಚರಣೆಯಲ್ಲಿ ತರುತ್ತಾ ವಿಜಯವನ್ನು ಸಾಧಿಸುತ್ತಾರೆ. ನೀವು ಎಂದು ಆತ್ಮದರ್ಶನ ಪಡೆಯುತ್ತೀರೋ, ಅಂದೇ ನೀವು ವಿಜಯ ಸಾಧಿಸಿದಂತೆ."

ಯೋಗ ಫಲವನ್ನು ಪಡೆಯಬೇಕಾದರೆ?

ಪೂರ್ವದಲ್ಲಿ ಋಷಿಗಳು, ಯೋಗಿಗಳು ಮುಂತಾದವರು ಸಾಧನೆ ಮಾಡಬೇಕೆಂದರೆ ಮನೆ ಬಿಟ್ಟು ಎಲ್ಲೋ ಅಡವಿಗಳಿಗೆ, ಹಿಮಾಲಯಕ್ಕೆ ಹೋಗುತ್ತಿದ್ದರು. ಆದರೆ ಈಗ ನೀವು ಕೆಲವು ನಿಯಮಗಳನ್ನು ಪಾಲಿಸುತ್ತಾ ಮನೆಯಲ್ಲೇ ಇದ್ದು ಉತ್ತಮವಾಗಿ ಸಾಧನೆ ಮಾಡಿಕೊಳ್ಳುತ್ತಿದ್ದೀರಿ. ಯೋಗ ಫಲವನ್ನು ಪಡೆಯಬೇಕಾದರೆ ನಿಮ್ಮ ಜೀವನದಲ್ಲಿ ನೀವು ಹೇಗಿರಬೇಕು? ಎಂತಹ ನಿಯಮಗಳನ್ನು ಪಾಲಿಸಬೇಕು? ಎಂದು ಮಲಯಾಳ ಸ್ವಾಮಿಯವರು ಹೇಳಿದ ಸಂದೇಶವನ್ನು ತಿಳಿದುಕೊಳ್ಳೋಣ.

1) ಸಂತೋಷವಾಗಿ ಜೀವಿಸಬೇಕು: ಸಾಧಕನು ಮೊದಲಿಗೆ ದುಃಖ, ಬಾಧೆಗಳೊಂದಿಗೆ ಈ ಮಾರ್ಗಕ್ಕೆ ಬರುತ್ತಾನೆ. ಗುರುವಿನ ಮೂಲಕ ಅವುಗಳಿಗೆ ಕಾರಣಗಳನ್ನು ತಿಳಿದುಕೊಂಡು ಸಾಧನೆ ಮಾಡಿ ಅವುಗಳಿಂದ ಹೊರಬಂದು ಸಂತೋಷಕರವಾದ ಜೀವನವನ್ನು ನಡೆಸುತ್ತಾನೆ.

ನಿಮ್ಮ ಜೀವನದಲ್ಲಿ ಬರುವ ಸುಖ-ಸಂತೋಷಗಳು, ಕಷ್ಟ-ನಷ್ಟಗಳು ನಿಮ್ಮ ಕರ್ಮ ಫಲಗಳೇ ಎಂದು ತಿಳಿದುಕೊಂಡು ಅವುಗಳ ಮೇಲೆ ದೃಷ್ಟಿ ಇಡದೆ, "ನಾನು ಎಂತಹ ಅದ್ಭುತವಾದ ಸಾಧನಾ ಮಾರ್ಗಕ್ಕೆ ಬಂದಿದ್ದೇನೆ, ಸರಿಯಾದ ಸದ್ಗುರುಗಳ ಬಳಿ ಬಂದಿದ್ದೇನೆ" ಎಂದು ಯಾವಾಗಲೂ ಸಂತೋಷವಾಗಿ ಇರಬೇಕು. ಏಕೆಂದರೆ ಎಷ್ಟು ಪೂಜೆಗಳು, ಎಷ್ಟು ನೋಂಪಿಗಳು (ವ್ರತಗಳು), ಎಷ್ಟು ವ್ರತಗಳನ್ನು ಮಾಡಿದರೂ ನಿಮ್ಮ ಕರ್ಮಗಳು ದಹನವಾಗುವುದಿಲ್ಲ, "ಧ್ಯಾನದ ಮೂಲಕ ಜ್ಞಾನವನ್ನು ಪಡೆದರೆ ಕರ್ಮಗಳು ದಹನವಾಗುತ್ತವೆ" ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮ ಹೇಳಿದ್ದಾನೆ. ಈ ಮಾರ್ಗಕ್ಕೆ ಬಂದ ನೀವು ಸಂತೋಷವಾಗಿ ಜೀವಿಸುತ್ತಾ ಎದುರಿಗಿರುವವರನ್ನು ಕೂಡ ಸಂತೋಷವಾಗಿ ಇರಿಸಬೇಕು. ಈ ಸಾಧನೆಯು ಆನಂದ ಸ್ವರೂಪನಾದ ಆತ್ಮನನ್ನು ಪಡೆಯುವುದಕ್ಕೇ ಮಾಡುತ್ತಿರುವುದರಿಂದ ಯಾವಾಗಲೂ ಸಂತೋಷವಾಗಿ ಜೀವಿಸಬೇಕು.

2) ಬಾಯಿಯನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು: ನಿಮ್ಮ ಬಾಯಿ ಎರಡು ರೀತಿಯಲ್ಲಿ ಕೆಲಸ ಮಾಡುತ್ತದೆ. ಒಂದು ಮಾತು ಮಾತನಾಡುವುದಕ್ಕೆ, ಎರಡನೆಯದು ಆಹಾರ ತೆಗೆದುಕೊಳ್ಳುವುದಕ್ಕೆ. ನಿಮಗೆ ಯೋಗ ಫಲ ಸಿದ್ಧಿಸಬೇಕೆಂದರೆ ಸಾಧನೆ ಮಾಡುತ್ತಿರುವ ನೀವು ಯಾವಾಗಲೂ ಶುದ್ಧವಾದ ಸಾತ್ವಿಕವಾದ ಶಾಖಾಹಾರ (ಸಸ್ಯಾಹಾರ) ತೆಗೆದುಕೊಳ್ಳಬೇಕು. ಹಾಗೆಯೇ ಯಾವಾಗಲೂ ಇತರರಲ್ಲಿ ದೋಷಗಳನ್ನು ಹುಡುಕಬಾರದು, ಇತರರನ್ನು ದೂಷಿಸಬಾರದು. ಎದುರಿನವರ ತಪ್ಪುಗಳನ್ನಲ್ಲ, ನೀವು ಏನು ತಪ್ಪುಗಳನ್ನು ಮಾಡುತ್ತಿದ್ದೀರಿ ಎಂದು ಗಮನಿಸಿಕೊಂಡು ಸರಿಪಡಿಸಿಕೊಂಡರೆ ಸಾಧನೆ ಚೆನ್ನಾಗಿ ಸಾಗುತ್ತದೆ. ಅದಕ್ಕಾಗಿಯೇ ನಾಲಿಗೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳುತ್ತಾ ಇತರರನ್ನು ಬೆರಳು ಮಾಡಿ ತೋರಿಸದೆ ನಿಮ್ಮ ಕೆಲಸಗಳನ್ನು ನೀವು ಮಾಡಿಕೊಳ್ಳುತ್ತಾ ಹೋದರೆ ನಿಮಗೆ ಸಾಧನೆ ಚೆನ್ನಾಗಿ ಸಿದ್ಧಿಸುತ್ತದೆ.

ನಿಮ್ಮ ಮಾತು ಹಿತವಾಗಿ, ಪ್ರಿಯವಾಗಿ, ಶಾಂತವಾಗಿ, ಸೌಮ್ಯವಾಗಿ, ಪ್ರೇಮವಾಗಿ ಇರಬೇಕು.
3) ಧರ್ಮವು: ಈ ಭೂಮಿಯ ಮೇಲೆ ಪ್ರತಿ ಮಾನವನಿಗೂ ಜೀವಿಸುವ ಹಕ್ಕಿದೆ, ಕರ್ಮಗಳನ್ನು ಮಾಡುವ ಹಕ್ಕಿದೆ. ಆದರೆ ನೀವು ಮಾಡುವ ಕರ್ಮಗಳನ್ನು ಧರ್ಮವಾಗಿ ಮಾಡುತ್ತಿದ್ದೀರಾ ಅಥವಾ ಅಧರ್ಮವಾಗಿ ಮಾಡುತ್ತಿದ್ದೀರಾ ಎಂದು ವಿಚಾರ ಮಾಡಿಕೊಳ್ಳಬೇಕು. ಸಾಧಕನು ಯಾವಾಗಲೂ ಧರ್ಮವನ್ನು ಆಶ್ರಯಿಸಬೇಕು, ಧರ್ಮವಾಗಿ ಜೀವಿಸಬೇಕು. ವ್ಯಾಸ ಭಗವಾನರು "ಪರೋಪಕಾರಾಯ ಪುಣ್ಯಂ, ಪಾಪ ಪರಪೀಡನಂ" ಎಂದು ಹೇಳಿದ್ದಾರೆ. ಅಂದರೆ ಇತರರಿಗೆ ಉಪಕಾರ ಮಾಡಿದರೆ ಪುಣ್ಯ, ಇತರರಿಗೆ ಅಪಕಾರ ಮಾಡಿದರೆ ಪಾಪ ಎಂದರ್ಥ. ನಿಮಗೆ ಯಾವ ವಿಷಯದಲ್ಲಿ ನೋವಾಗುತ್ತದೆಯೋ, ಯಾವ ವಿಷಯದಲ್ಲಿ ನಷ್ಟ ಉಂಟಾಗುತ್ತದೆಯೋ ಅಂತಹವುಗಳನ್ನು ಇತರರಿಗೆ ಮಾಡದಿರುವುದೇ ಧರ್ಮ.

ಅದಕ್ಕಾಗಿಯೇ ಯೋಗ ಜೀವನದಲ್ಲಿ ಬಾಹ್ಯವಾಗಿ ಧರ್ಮವಂತವಾದ ಜೀವನ ನಡೆಸಬೇಕು, ಅಂತರಂಗದಲ್ಲಿ ಸತ್ಯಾನ್ವೇಷಣೆ ಅಂದರೆ ಆತ್ಮವನ್ನು ಅನ್ವೇಷಿಸಬೇಕು. ಅದಕ್ಕಾಗಿಯೇ ಧರ್ಮವಂತವಾದ ಜೀವನ ನಡೆಸಿದರೆ ಸತ್ಯಕ್ಕೆ ಹತ್ತಿರವಾಗುತ್ತೀರಿ ಎಂದು ಮಲಯಾಳ ಸ್ವಾಮಿಯವರು ಹೇಳಿದ್ದಾರೆ.
4) ದಾನ: ನೀವು ದರಿದ್ರರಿಗೆ (ಬಡವರಿಗೆ) ದಾನ ಮಾಡಬೇಕು. ಪ್ರಸ್ತುತ ಸಮಾಜದಲ್ಲಿ ಮದುವೆ ಅಥವಾ ಹುಟ್ಟಿದ ಹಬ್ಬದಂತಹ ಶುಭ ಕಾರ್ಯಗಳಲ್ಲಿ ತಮ್ಮ ಬಂಧುಗಳನ್ನು, ಸ್ನೇಹಿತರನ್ನು ಕರೆದು ಬಹಳ ವೈಭವದಿಂದ ಆಚರಿಸುತ್ತಾರೆ. ಆದರೆ ಬಡವರಿಗೆ ಅಥವಾ ದರಿದ್ರರಿಗೆ ಯಾವುದೇ ದಾನವಾಗಲಿ, ಸಹಾಯವಾಗಲಿ ಮಾಡುವುದಿಲ್ಲ. ಈ ಮಾರ್ಗಕ್ಕೆ ಬಂದಿರುವ ನೀವು ಎಂತಹವರಿಗೆ ದಾನ ಮಾಡಬೇಕೆಂದು ಗಮನಿಸಿಕೊಳ್ಳಬೇಕು. ಕೇವಲ ದೊಡ್ಡವರಿಗಷ್ಟೇ ಅಲ್ಲ, ಸಾಮಾನ್ಯ ಜನರಿಗೂ ದಾನ ಮಾಡಬೇಕು.
5) ಸಜ್ಜನ ಸಾಂಗತ್ಯ: "ಸಾಧುಗಳ ಜೊತೆ, ಸತ್ಪುರುಷರ ಜೊತೆ, ಸಜ್ಜನರ ಜೊತೆ ಮಾಡುವ ಸಾಂಗತ್ಯವು ಸತ್ಯಕ್ಕೆ ಹತ್ತಿರ ಮಾಡುತ್ತದೆ". ಈ ಪ್ರಪಂಚದ ಮೇಲಿರುವ ವ್ಯಾಮೋಹವನ್ನು ಕಡಿಮೆ ಮಾಡಿಕೊಂಡು, ವೈರಾಗ್ಯ ಬೆಳೆಸಿಕೊಂಡು, ಪರಮಾತ್ಮನ ಮೇಲೆ ಪ್ರೀತಿಯನ್ನು ಹೇಗೆ ಬೆಳೆಸಿಕೊಳ್ಳಬೇಕು? ಎಂಬುದನ್ನು ಒಬ್ಬ ಸಾಧುವಿನ ಮೂಲಕ ತಿಳಿದುಕೊಳ್ಳಬಹುದು. ಸತ್ಯವನ್ನು ಹೇಗೆ ದರ್ಶಿಸಬೇಕು? ಎನ್ನುವುದನ್ನು ಒಬ್ಬ ಸತ್ಪುರುಷನ ಮೂಲಕ ತಿಳಿಯಬಹುದು. ಸಜ್ಜನರು ಎಂದರೆ ಭಗವಂತ ಯಾರೆಂದು ತಿಳಿದುಕೊಂಡು ಒಳ್ಳೆಯ ಕೆಲಸಗಳನ್ನು ಮಾಡುವವರು.ಹೀಗೆ ಸಾಧುಗಳ, ಸತ್ಪುರುಷರ ಮತ್ತು ಸಜ್ಜನರ ಸಾಂಗತ್ಯದ ಮೂಲಕ ನಿಮ್ಮ ಸಾಧನೆಯು ಚೆನ್ನಾಗಿ ಸಿದ್ಧಿಸುತ್ತದೆ.

ನೀವು ಈ ಪ್ರಪಂಚದಲ್ಲಿ ಜೀವಿಸುತ್ತಿರುವುದರಿಂದ ಸತ್ಯ ತಿಳಿದಿದ್ದರೂ ಸಹ ಆಗಾಗ್ಗೆ ಮಾಯೆಗೆ ವಶವಾಗುತ್ತಿರುತ್ತೀರಿ. ನೀವು ಮನಸ್ಸಿನ ಪ್ರಭಾವದಿಂದ ಈ ಪ್ರಪಂಚದ

ಆಕರ್ಷಣೆಗಳಿಗೆ ಒಳಗಾಗುತ್ತಿರುತ್ತೀರಿ. ಸಜ್ಜನ ಸಾಂಗತ್ಯದ ಮೂಲಕ ಪ್ರಪಂಚದ ಕಡೆಗೆ ಹೋಗುವ ಮನಸ್ಸನ್ನು ಆತ್ಮದ ಕಡೆಗೆ ಮರಳಿಸಬೇಕು. **"ಪ್ರಪಂಚದ ಕಡೆಗೆ ತಿರುಗಿದ ಮನಸ್ಸು ನಿಮಗೆ ಶತ್ರುವಾಗುತ್ತದೆ, ಅದೇ ಆತ್ಮದ ಕಡೆಗೆ ತಿರುಗಿದ ಮನಸ್ಸು ನಿಮಗೆ ಮಿತ್ರನಾಗುತ್ತದೆ".** ಆಹಾರದಿಂದ ಮನಸ್ಸು ಏರ್ಪಡುತ್ತದೆ (ರೂಪುಗೊಳ್ಳುತ್ತದೆ), ಆದ್ದರಿಂದ ಸಾಧಕರು ಸೇವಿಸುವ ಆಹಾರವು ಶುದ್ಧ ಸಾತ್ವಿಕವಾಗಿರಬೇಕು. ಹಾಗೆಯೇ ಒಂದು ದಿನ ಧ್ಯಾನ ಮಾಡದಿದ್ದರೆ ಏನಿದೆ ಬಿಡು ಎಂದು ಅಸಡ್ಡೆ ಮಾಡಿದರೆ ಮಾಯೆಯಲ್ಲಿ ಸಿಲುಕಿಕೊಳ್ಳುತ್ತೇವೆ. ಅದಕ್ಕಾಗಿಯೇ ನಿರಂತರವಾಗಿ ಧ್ಯಾನ ಸಾಧನೆ ಅಗತ್ಯವೆಂದು ತಿಳಿದುಕೊಳ್ಳಬೇಕು.

6) ವೈರಾಗ್ಯ: ಈ ಸೃಷ್ಟಿಯೆಲ್ಲವೂ ನಶಿಸಿಹೋಗುವಂತದ್ದು, ಈ ಪ್ರಪಂಚವೆಲ್ಲವೂ ಮಿಥ್ಯೆ. ಇದರ ಬೆನ್ನತ್ತಿ ಹೋದರೆ ಉಳಿಯುವುದು ಕೇವಲ ದುಃಖ ಮಾತ್ರ ಎಂದು ಯಾವಾಗಲೂ ವಿವೇಚನೆ ಮಾಡುತ್ತಾ, ಈ ಪ್ರಪಂಚದ ಮೇಲೆ ವೈರಾಗ್ಯವನ್ನು ಹೊಂದಿರಬೇಕು. ಹೊರಗಡೆ ಕಾಣುವುದೆಲ್ಲವೂ ಮಾಯೆ. ನಿಮ್ಮೊಳಗಿರುವ 'ಆತ್ಮ'ವೇ ಸತ್ಯ ಎಂದು ಗುರುಗಳ ಬೋಧನೆಯ ಮೂಲಕ ತಿಳಿದುಕೊಂಡಾಗ ಮತ್ತು ಅದನ್ನು ಅನುಮಾನವಿಲ್ಲದೆ ಆಚರಣೆಯಲ್ಲಿ ತಂದಾಗ ಮಾತ್ರ ನೀವು ಈ ಸಾಧನಾ ಮಾರ್ಗದಲ್ಲಿ ಬೆಳೆಯಲು ಸಾಧ್ಯವಾಗುತ್ತದೆ.

7) ಅಹಂಕಾರ: ಅಹಂಕಾರ ಎಂಬುದು ಸಾಧಕನ ಹತ್ತಿರಕ್ಕೂ ಬರಬಾರದು. ಏಕೆಂದರೆ ನಿಮ್ಮನ್ನು ಕೆಳಕ್ಕೆ ಬೀಳಿಸುವುದೇ ಅಹಂಕಾರ. "ನಾನು ಈ ಶರೀರ" ಎಂದುಕೊಂಡರೆ ಅಹಂಕಾರ ಬರುತ್ತದೆ, ಆದ್ದರಿಂದ ಸಾಧಕನು ಯಾವಾಗಲೂ ಆತ್ಮಸ್ವರೂಪಿಯಾಗಿ ಜೀವಿಸಬೇಕು. ಲೌಕಿಕವಾಗಿ ಜೀವಿಸುವಾಗ ಹೆಸರು, ಪ್ರತಿಷ್ಠೆ, ಹಣ, ವಿದ್ಯೆ ಇವುಗಳನ್ನು ನೋಡಿ ಅಹಂಕಾರದಿಂದ ಇರುತ್ತಾರೆ. ಅದೇ ರೀತಿ ಆಧ್ಯಾತ್ಮಿಕತೆಗೆ ಬಂದ ಮೇಲೆ ಜ್ಞಾನವನ್ನು ಸಂಪಾದಿಸಿ ಹೊರಗೆ ಹೋಗಿ ಎಲ್ಲರಿಗೂ ಬೋಧಿಸುವಾಗ, ಎಲ್ಲರೂ **"ನೀವು ಚೆನ್ನಾಗಿ ಹೇಳುತ್ತಿದ್ದೀರಿ, ನಿಮಗೆ ಬಹಳ ಜ್ಞಾನವಿದೆ"** ಎಂದು ಹೊಗಳಿದಾಗ ಅಹಂಕಾರ ಬರಬಹುದು. ಅಂತಹ ಮಾಯೆಯಲ್ಲಿ ಬೀಳದೆ, **"ಇದು ಭಗವಂತನ ಕೃಪೆ"** ಎಂದು ತಿಳಿದು ಮಾಯೆಯಿಂದ ದೂರವಿರಬೇಕು.

"ದುಂಬಿಯು ಪ್ರತಿ ಹೂವಿನ ಮೇಲೆ ಕುಳಿತು ಆ ಹೂವಿನ ಅಂದವನ್ನು, ಸುಗಂಧವನ್ನು ಕೆಡಿಸದೆ ಅದರೊಳಗಿನ ಮಕರಂದವನ್ನು ಸಂಗ್ರಹಿಸಿ ಎಲ್ಲರಿಗೂ ಜೇನುತುಪ್ಪವನ್ನು ಹಂಚುವಂತೆ ಒಬ್ಬ ಸಾಧಕನು ಈ ಪ್ರಪಂಚದಲ್ಲೇ ಇದ್ದುಕೊಂಡು ಅಹಂಕಾರ, ಮಮಕಾರ, ರಾಗದ್ವೇಷಗಳನ್ನು ಅಂಟಿಸಿಕೊಳ್ಳದೆ ಸಾಧನೆಯ ಮೂಲಕ ಜ್ಞಾನವನ್ನು ಪಡೆದು ಆ ಜ್ಞಾನವನ್ನು ಎಲ್ಲರಿಗೂ ಹಂಚಬೇಕು." ದುಂಬಿಯು ಜೇನುತುಪ್ಪವನ್ನು ಎಲ್ಲರಿಗೂ ಹೇಗೆ ನೀಡುತ್ತದೋ, ಹಾಗೆಯೇ ನೀವು ಕೂಡ ಜ್ಞಾನವನ್ನು ಎಲ್ಲರಿಗೂ ಹಂಚಬೇಕು.

ಸಾಮಾಜಿಕ ಸತ್ಯ, ಪರಮ ಸತ್ಯ

ಪ್ರತಿಯೊಬ್ಬರಲ್ಲೂ ಆತ್ಮ ದರ್ಶನ ಮಾಡಿಕೊಳ್ಳಬೇಕೆಂಬ ಜಿಜ್ಞಾಸೆ (ಹಂಬಲ) ಇರುತ್ತದೆ. ಈ ಮಾರ್ಗಕ್ಕೆ ಬಂದ ನೀವು, ತಾವು ಕೇವಲ ಶರೀರವಲ್ಲ ಆತ್ಮ ಎಂದು, ಆತ್ಮ ಎಂದರೆ ಭಗವಂತ ಎಂದು ಗುರುಗಳ ಮೂಲಕ ತಿಳಿದುಕೊಂಡಿದ್ದೀರಿ. ಆದರೆ ನೀವು ಆತ್ಮದಂತೆಯೇ ವರ್ತಿಸುತ್ತಿದ್ದೀರಾ? ಎಂದರೆ ಇಲ್ಲ. ಏಕೆಂದರೆ ಈ ಸೃಷ್ಟಿಯಲ್ಲಿ ನಿಮ್ಮ ಕಣ್ಣಿಗೆ ಕಾಣುವ ಪ್ರತಿಯೊಂದೂ ಸತ್ಯವೆಂದೇ ಅನಿಸುತ್ತಿದೆ.

ಈ ಜ್ಞಾನ ಮಾರ್ಗಕ್ಕೆ ಬಂದ ನೀವು ಮಾಡಬೇಕಾದದ್ದು ಆತ್ಮ ಕರ್ಮಗಳು. ಪುಣ್ಯ ಕರ್ಮಗಳು ಮತ್ತು ಪಾಪ ಕರ್ಮಗಳು ಅನುಭವಿಸಿದರೆ ತೀರಿಹೋಗುತ್ತವೆ, ಆದರೆ ಕೇವಲ ಆತ್ಮ ಕರ್ಮಗಳು ಮಾತ್ರ ಆತ್ಮ ದರ್ಶನವನ್ನು ಉಂಟುಮಾಡುತ್ತವೆ ಎಂದು ತಿಳಿದುಕೊಳ್ಳಬೇಕು.

ಆತ್ಮವು ಪ್ರಾರಂಭದ ಜನ್ಮಗಳಲ್ಲಿ ತಮೋಗುಣ ಮತ್ತು ರಜೋಗುಣಗಳನ್ನು ಹೊಂದಿರುವುದರಿಂದ, ಶರೀರವನ್ನು ಭೋಗಗಳಲ್ಲಿ ಬಂಧಿಸುತ್ತದೆ. ಅದಕ್ಕಾಗಿಯೇ ಪ್ರಾರಂಭದ ಜನ್ಮಗಳಲ್ಲಿ ಇರುವವರು 'ಶರೀರವೇ ನಾನು' ಎಂಬಂತೆ ಜೀವಿಸುತ್ತಾರೆ. ಅಂತಹ ಕೆಲವು ಜನ್ಮಗಳ ನಂತರ ಸಾತ್ವಿಕ ಗುಣಕ್ಕೆ ಬಂದು, ಈ ಯೋಗ ಮಾರ್ಗವನ್ನು ಪ್ರವೇಶಿಸಿ 'ಆತ್ಮವೇ ನಾನು, ಆತ್ಮವೇ ಭಗವಂತ' ಎಂದು ತಿಳಿದುಕೊಳ್ಳುತ್ತಾರೆ. ಆದರೆ ಇನ್ನೂ ನಿಮ್ಮಲ್ಲಿ ದೇಹ ವಾಸನೆ, ಸಂಘ ವಾಸನೆ, ಸಂಸಾರ ವಾಸನೆಗಳು ಇರುವುದರಿಂದ ಬಂಧನಗಳನ್ನು ಬಿಟ್ಟುಕೊಡಲಾರರು, ಹಾಗೆಂದು ಭಗವಂತನನ್ನು ಮರೆಯಲೂ ಸಾಧ್ಯವಿಲ್ಲ.

ಇಂತಹ ಸಂದಿಗ್ಧ ಸ್ಥಿತಿಯಲ್ಲಿ ನೀವು ಇದ್ದಾಗ, ನಿಮ್ಮ ಜೀವನಕ್ಕೆ ಒಬ್ಬ ಸದ್ಗುರು ಬಂದು ಆ ಭಗವಂತನನ್ನು ಸೇರುವ ಮಾರ್ಗವನ್ನು ತೋರಿಸುತ್ತಾರೆ. ಅಂತಹವರೇ ನಮ್ಮ ಗುರುಗಳಾದ ಪತ್ರೀಜಿಯವರು ಮತ್ತು ರಾಘವರಾವ್ ಅವರು.

ಈ ಸೃಷ್ಟಿಯಲ್ಲಿ ಜೀವನದ ಪರಮಾರ್ಥವೇನೆಂದು ಕೇವಲ ಮಾನವನು ಮಾತ್ರ ತಿಳಿದುಕೊಳ್ಳಬಲ್ಲನು. ಬೇರೆ ಯಾವುದೇ ಜೀವಿ ಅಥವಾ ಪ್ರಾಣಿ ಸಂಕುಲಕ್ಕೆ ಇದು ಸಾಧ್ಯವಿಲ್ಲ, ಆ ಅವಕಾಶ ಕೇವಲ ಮಾನವನಿಗೆ ಮಾತ್ರ ನೀಡಲಾಗಿದೆ. ನಿಮ್ಮ ಜೀವನದ ಗುರಿ ಏನು? ಈ ಭೂಮಿಯ ಮೇಲೆ ಏಕೆ ಬಂದೆನು? ಎಂಬುದನ್ನು ಗುರುಗಳ ಮೂಲಕ ನೀವು ತಿಳಿದುಕೊಂಡಿದ್ದೀರಿ. ನಿಮ್ಮ ಕಳೆದ ಜನ್ಮದ ವಾಸನೆಗಳು ಮತ್ತು ಸಂಸ್ಕಾರಗಳ ಕಾರಣದಿಂದಾಗಿ ನೀವು ಆಗಾಗ್ಗೆ ಎಚ್ಚರವನ್ನು (awareness) ಕಳೆದುಕೊಳ್ಳುತ್ತಿರುತ್ತೀರಿ. ಅದಕ್ಕಾಗಿಯೇ ಮಹಾತ್ಮರು ಎರಡು ಸತ್ಯಗಳನ್ನು ಹೇಳಿದ್ದಾರೆ. ಅವು:

1) ಸಾಮಾಜಿಕ ಸತ್ಯ (ವ್ಯಾವಹಾರಿಕ ಸತ್ಯ) 2) ಪರಮ ಸತ್ಯ. ಇವುಗಳ ಬಗ್ಗೆ ವಿವರಿಸಿಕೊಳ್ಳೋಣ.

1) ಸಾಮಾಜಿಕ ಸತ್ಯ: ಸಾಮಾಜಿಕ ಸತ್ಯ ಎಂದರೆ ಹೆಚ್ಚು ಕಡಿಮೆ ಲೌಕಿಕ ಸತ್ಯ ಎಂದು

ಹೇಳಬಹುದು. ಈ ಭೂಮಿಯ ಮೇಲೆ ಎಂತಹ ಕರ್ಮಗಳನ್ನು ಮಾಡಿದರೂ ಅವುಗಳ ಫಲ ಇರುತ್ತದೆ ಎಂದು ನಿಮಗೆ ತಿಳಿದಿದೆ. ಪೂರ್ವ ಜನ್ಮದಲ್ಲಿ ಪುಣ್ಯ ಮಾಡಿದ್ದರೆ ಈ ಜನ್ಮದಲ್ಲಿ ಭೋಗಗಳನ್ನು ಅನುಭವಿಸಿದರೆ ಆ ಪುಣ್ಯ ಫಲವು ತೀರುತ್ತದೆ. ಹಾಗೆಯೇ ಪೂರ್ವ ಜನ್ಮದಲ್ಲಿ ಮಾಡಿದ ಪಾಪಕ್ಕೆ ಈ ಜನ್ಮದಲ್ಲಿ ದುಃಖ, ಬಾಧೆಗಳನ್ನು ಅನುಭವಿಸಿದರೆ ಆ ಪಾಪ ಫಲವು ತೀರುತ್ತದೆ. ಆದರೆ ಈ ಜನ್ಮದಲ್ಲಿ ಧ್ಯಾನದ ಮೂಲಕ ಪಡೆದ ಜ್ಞಾನದ ಫಲವು ಮುಂದಿನ ಜನ್ಮದಲ್ಲಿ ನಿಮ್ಮೊಂದಿಗೆ ಬರುತ್ತದೆ.

"ದೇಹವೇ ನಾನು, ಈ ಪ್ರಪಂಚವು ಶಾಶ್ವತ" ಎಂದುಕೊಳ್ಳುತ್ತಾ, ಆ ಪರಮಾತ್ಮನ ಬಗ್ಗೆ ತಿಳುವಳಿಕೆ ಇಲ್ಲದವರು ಸಾಮಾಜಿಕ ಸತ್ಯವೇ ಅಸಲಿ ಸತ್ಯ ಎಂದು ಭಾವಿಸಿ, ಹಾಗೆಯೇ ಕೆಲವು ಜನ್ಮಗಳ ಕಾಲ ಪಾಪ ಕರ್ಮಗಳನ್ನು, ಪುಣ್ಯ ಕರ್ಮಗಳನ್ನು ಮಾಡುತ್ತಾ ಇರುತ್ತಾರೆ. ಹಾಗೆ ಕೆಲವು ಜನ್ಮಗಳನ್ನು ಎತ್ತಿದ ನಂತರ ಸಾತ್ವಿಕ ಗುಣಕ್ಕೆ ಬಂದು ಪುಣ್ಯ ಕರ್ಮಗಳನ್ನು ಮಾಡಲು ಪ್ರಾರಂಭಿಸುತ್ತಾರೆ, ಏಕೆಂದರೆ ಮುಂದಿನ ಜನ್ಮವು ಒಳ್ಳೆಯ ಜನ್ಮವಾಗಿ ಬರುತ್ತದೆ ಎಂಬ ಆಶಯದಿಂದ. ಆದರೆ ಲೌಕಿಕ ಭೋಗಗಳನ್ನು, ಸುಖಗಳನ್ನು ನೋಡಿಕೊಂಡಿದ್ದರೆ ಮೋಕ್ಷಕ್ಕೆ ಅರ್ಹತೆ ಪಡೆಯಲಾರರು. ಇಹ ಮತ್ತು ಪರ ಭೋಗಗಳ ಮೇಲೆ ವೈರಾಗ್ಯ ಉಂಟಾದಾಗ ಮಾತ್ರ ಮೋಕ್ಷಕ್ಕೆ ಅರ್ಹತೆಯನ್ನು ಸಂಪಾದಿಸುತ್ತಾರೆ.

ಭಗವದ್ಗೀತೆಯಲ್ಲಿ ಕೂಡ "ಕ್ಷೀಣೇ ಪುಣ್ಯೇ ಮರ್ತ್ಯ ಲೋಕಂ ವಿಶಂತಿ" ಎಂದು ಹೇಳಲಾಗಿದೆ. ಅಂದರೆ ಸ್ವರ್ಗದಲ್ಲಿ ಪುಣ್ಯ ಫಲಗಳನ್ನು ಅನುಭವಿಸಿದರೆ, ಆ ಪುಣ್ಯ ಫಲವು ತೀರಿಹೋಗುತ್ತದೆ ಎಂದರು. ಸಾತ್ವಿಕ ಗುಣವನ್ನು ಹೊಂದಿದವರು ಪುಣ್ಯ ಕರ್ಮಗಳನ್ನು ಮಾಡಿ, ಅದರ ಫಲವನ್ನು ಆ ಭಗವಂತನಿಗೆ ಅರ್ಪಿಸಿದರೆ ಅವರ ಹೃದಯ ಶುದ್ಧಿಯಾಗುತ್ತದೆ. ಈ ಮಾರ್ಗಕ್ಕೆ ಬಂದವರೆಲ್ಲರೂ ಸಹ ಕರ್ಮ ಫಲವನ್ನು ತ್ಯಾಗ ಮಾಡಬೇಕು.

ಸನ್ಯಾಸತ್ವ ಸ್ವೀಕರಿಸಿ ಕಾವಿ ಬಟ್ಟೆ ಧರಿಸಿದ ಮಾತ್ರಕ್ಕೆ ಕರ್ಮ ಫಲ ತ್ಯಾಗ ಮಾಡಿದಂತಲ್ಲ, ಅಥವಾ ಕರ್ಮಗಳನ್ನು ಬಿಡುವುದಲ್ಲ, ಅವುಗಳ ಫಲವನ್ನು ಬಿಡಬೇಕು. ಪುಣ್ಯ ಕರ್ಮಗಳನ್ನು ಮಾಡಬೇಕು ಆದರೆ ಅವುಗಳ ಫಲವನ್ನು ಪರಮಾತ್ಮನಿಗೆ ಅರ್ಪಿಸಬೇಕು, ಆಗಲೇ ನಿಮ್ಮ ಹೃದಯ ಶುದ್ಧಿಯಾಗುತ್ತದೆ. ಆಗಲೇ ಪರಮಾತ್ಮನನ್ನು ದರ್ಶಿಸಬೇಕು ಎಂಬ ಜಿಜ್ಞಾಸೆ ನಿಮ್ಮಲ್ಲಿ ಮೊದಲಿಡುತ್ತದೆ. ಆ ಕೋರಿಕೆ ತೀರಬೇಕೆಂದರೆ "ಶ್ವಾಸದ ಮೇಲೆ ಧ್ಯಾಸ" (ಶ್ವಾಸದ ಮೇಲೆ ಗಮನ) ಎಂಬ ಧ್ಯಾನದ ಮೂಲಕ ಮತ್ತು ಸದ್ಗುರುಗಳು ಬೋಧಿಸಿದ "ಜ್ಞಾನ"ದ ಮೂಲಕ ಸಾಧ್ಯವಾಗುತ್ತದೆ ಎಂದು ತಿಳಿದುಕೊಳ್ಳುತ್ತಾರೆ.

2) ಪರಮಸತ್ಯ: ಪರಮ ಸತ್ಯ ಎಂಬುದು ಈ ಭೌತಿಕ ಪ್ರಪಂಚಕ್ಕೆ ಅತೀತವಾದದ್ದು, ಶಾಶ್ವತವಾದದ್ದು ಮತ್ತು ಬದಲಾವಣೆ ಇಲ್ಲದ್ದು. ಒಬ್ಬ ಸದ್ಗುರುಗಳ ಮೂಲಕ ಸಾಧನೆ

ಮತ್ತು ಜ್ಞಾನವನ್ನು ಪಡೆದು, ಈ ಸೃಷ್ಟಿ ಶಾಶ್ವತವಲ್ಲ, ಈ ಸೃಷ್ಟಿಯನ್ನು ಸೃಷ್ಟಿಸಿದ ಭಗವಂತನೇ ಶಾಶ್ವತವಾದವನು ಎಂದು ತಿಳಿದುಕೊಳ್ಳುವುದೇ ಪರಮಸತ್ಯ. ಈ ಸೃಷ್ಟಿಯಲ್ಲಿ ಅಣುಮಾತ್ರವಿರುವ **"ಈ ಭೂಮಂಡಲವನ್ನು ನೋಡಿ ಇದೇ ಶಾಶ್ವತ ಎಂದು ಅಂದುಕೊಳ್ಳುವುದು ಸಾಮಾಜಿಕ ಸತ್ಯವಾದರೆ... ಈ ಸೃಷ್ಟಿಯನ್ನು ಸೃಷ್ಟಿಸಿದ ಆ ಸೃಷ್ಟಿಕರ್ತನೇ ಶಾಶ್ವತವಾದವನು ಎಂದು ತಿಳಿದುಕೊಳ್ಳುವುದೇ ಪರಮಸತ್ಯ"**.

ಈ ಸೃಷ್ಟಿಯಲ್ಲಿರುವ ಬ್ರಹ್ಮಾಂಡಗಳು ಬದಲಾಗುತ್ತವೆ, ಈ ಸೃಷ್ಟಿಯಲ್ಲಿರುವುದೆಲ್ಲವೂ ಬದಲಾವಣೆಗೆ ಒಳಪಡುವಂಥದ್ದೇ, ಆದರೆ ಒಂದು ಹುಲ್ಲಿನ ಕಡ್ಡಿಯಷ್ಟೂ ಬದಲಾವಣೆ ಇಲ್ಲದವನು ಪರಮಾತ್ಮ. ಅಶಾಶ್ವತವಾದ ಈ ಸೃಷ್ಟಿ ಸಾಮಾಜಿಕ ಸತ್ಯವಾದರೆ, ಶಾಶ್ವತವಾದ ಪರಬ್ರಹ್ಮನೇ ಪರಮಸತ್ಯ.

ಪರಮ ಸತ್ಯಕ್ಕೆ ಏರಿಳಿತಗಳಿರುವುದಿಲ್ಲ. ಅಂತಹ ಪರಮ ಸತ್ಯವನ್ನು ತಿಳಿದುಕೊಳ್ಳಬೇಕೆಂದರೆ ನಿರಂತರ ಧ್ಯಾನ ಸಾಧನೆ ಮತ್ತು ನಿರಂತರ ಜ್ಞಾನದ ಹಸಿವು ಇರಬೇಕು. ಆಗ ಈ ಸೃಷ್ಟಿಯಲ್ಲಿ ನಿಮಗೆ ತಿಳಿಯದ ವಿಷಯಗಳೇ ಇರುವುದಿಲ್ಲ, ಏಕೆಂದರೆ ಈ ಸೃಷ್ಟಿ ಅಂತರ್ಯದಲ್ಲಿ ವ್ಯಾಪಿಸಿರುವ ಆತ್ಮ ನೀವೇ ಆದಾಗ, ನಿಮಗೆ ತಿಳಿಯದಿರುವುದು ಏನಿರುತ್ತದೆ? ಈ ಮಾರ್ಗಕ್ಕೆ ಬಂದಿರುವ ನೀವೆಲ್ಲರೂ ಬಾಹ್ಯ ದೃಷ್ಟಿಯನ್ನು ಬಿಟ್ಟು ಅಂತರ್ ದೃಷ್ಟಿಯನ್ನು ಹೊಂದಬೇಕೆಂದರೆ, ಸಾಮಾಜಿಕ ಸತ್ಯದಿಂದ ಪರಮ ಸತ್ಯದ ಕಡೆಗೆ ತಿರುಗಬೇಕು.

ಆತ್ಮಗಳಾದ ನೀವು ಆತ್ಮಗಳಾಗಿ ಜೀವಿಸಲು ಸಾಧ್ಯವಾಗುತ್ತಿಲ್ಲ ಎಂದರೆ, ಆಹಾರದ ಲೋಪದಿಂದಾಗಲಿ ಅಥವಾ ನಿಮ್ಮ ಸುತ್ತಮುತ್ತಲಿರುವ ಪರಿಸರದ ಪ್ರಭಾವದಿಂದಾಗಲಿ ಮಾಯೆಯಲ್ಲಿ ಸಿಲುಕಿ ಸಾಮಾಜಿಕ ಸತ್ಯವನ್ನೇ ಪರಮ ಸತ್ಯವೆಂದು ಭಾವಿಸುತ್ತಿದ್ದೀರಿ. 'ನಾನು', 'ನನ್ನದು' ಎನ್ನುವ ಭಾವನೆ ಇರುವವರೆಗೆ ಪರಮ ಸತ್ಯವನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ವಸಿಷ್ಠರು "ವಿಚಾರಣೆಯೇ ಪರಮಾತ್ಮ ಜ್ಞಾನ" ಎಂದು ಹೇಳಿದ್ದಾರೆ. ಜ್ಞಾನ ಎಷ್ಟು ಹೆಚ್ಚಾಗಿದೆ? ಯಾವ ತಪ್ಪುಗಳನ್ನು ಮಾಡುತ್ತಿದ್ದೇವೆ? ಎದುರಿರುವವರೊಂದಿಗೆ ಹೇಗೆ ನಡೆದುಕೊಳ್ಳುತ್ತಿದ್ದೇವೆ? ಎನ್ನುವ ವಿಚಾರಣೆಯನ್ನು ಯಾವಾಗಲೂ ಮಾಡುತ್ತಿರಬೇಕು.

ಕೆಲವರು ಕೆಲವು ಅಭ್ಯಾಸಗಳಿಗೆ ದಾಸರಾಗಿ ತಪ್ಪುಗಳನ್ನು, ಪಾಪಗಳನ್ನು ಮಾಡುತ್ತಾರೆ, ಇನ್ನು ಕೆಲವರು ಎದುರಿರುವವರನ್ನು ಟೀಕಿಸುತ್ತಿರುತ್ತಾರೆ. ಆದರೆ ಎದುರಿರುವವರು ಕೂಡ ಆತ್ಮ ಸ್ವರೂಪಿಗಳೇ ಎಂದು ತಿಳಿದುಕೊಂಡು, ಅವರಲ್ಲಿರುವ ಒಳ್ಳೆಯದನ್ನು ಸ್ವೀಕರಿಸಿ ಕೆಟ್ಟದ್ದನ್ನು ಬಿಟ್ಟುಬಿಡಬೇಕು.

ಗುರುವಿನ ಬಳಿ ಸಾಧನೆ ಮತ್ತು ಜ್ಞಾನವನ್ನು ಕಲಿಯುತ್ತಾ, ನಿಮ್ಮ ಜೀವನದ

ಪ್ರತಿಯೊಂದು ಘಟನೆಯನ್ನು ವಿಮರ್ಶಿಸಿಕೊಳ್ಳುತ್ತಾ ಬೆಳೆಯಬೇಕು. ಉದಾಹರಣೆಗೆ, ಒಬ್ಬ ವಿದ್ಯಾರ್ಥಿ ಶಾಲೆಗೆ ಹೋಗಿ ಓದುತ್ತಿರುವಾಗ ಆ ತರಗತಿಯಲ್ಲಿ ದಿನಕ್ಕೆ ಏಳು ಪಿರಿಯಡ್ಗಳಿದ್ದರೆ, ಒಂದೊಂದು ಪಿರಿಯಡ್ಗೆ ಒಬ್ಬೊಬ್ಬ ಶಿಕ್ಷಕರು ಒಂದೊಂದು ವಿಷಯವನ್ನು ಬೋಧಿಸುತ್ತಾರೆ. ಆ ವಿದ್ಯಾರ್ಥಿಯು ಆ ಏಳು ವಿಷಯಗಳನ್ನು ಓದಿದರೆ ಮಾತ್ರ ಉತ್ತೀರ್ಣನಾಗುತ್ತಾನೆ. ಅದನ್ನು ಬಿಟ್ಟು "ನನಗೆ ಒಂದು ವಿಷಯವೆಂದರೆ ಇಷ್ಟ" ಎಂದು ಅದನ್ನು ಮಾತ್ರ ಓದಿದರೆ ಉಳಿದವುಗಳಲ್ಲಿ ಉತ್ತೀರ್ಣನಾಗಲು ಸಾಧ್ಯವಿಲ್ಲ ಮತ್ತು ಮುಂದಿನ ತರಗತಿಗೆ ಹೋಗಲು ಸಾಧ್ಯವಿಲ್ಲ. ಅದೇ ರೀತಿ ನಿಮ್ಮಲ್ಲಿರುವ ಲೋಪದೋಷಗಳನ್ನು ವಿಮರ್ಶಿಸಿಕೊಳ್ಳುತ್ತಾ ಒಂದೊಂದೇ ದೋಷವನ್ನು ಸರಿಪಡಿಸಿಕೊಳ್ಳುತ್ತಾ ಹೋದರೆ ಈ ಮಾರ್ಗದಲ್ಲಿ ಮುಂದುವರಿಯಲು ಸಾಧ್ಯವಾಗುತ್ತದೆ.

ಪರಮ ಸತ್ಯವನ್ನು ಬೋಧಿಸಲೆಂದೇ ಆ ಪರಬ್ರಹ್ಮನು ಗುರುವಿನ ರೂಪದಲ್ಲಿ ಬರುತ್ತಾನೆ ಎಂದು ದಕ್ಷಿಣಾಮೂರ್ತಿಯು ಹೇಳಿದ್ದಾರೆ. ನಿಮ್ಮ ಜೀವನದಲ್ಲಿ ಎಷ್ಟೋ ಗುರುಗಳು ಬಂದಿರಬಹುದು, ಆದರೆ ಲೌಕಿಕ ಲಾಭಗಳು ಅಂದರೆ ಸಾಮಾಜಿಕ ಸತ್ಯವನ್ನು ತಿಳಿಸುವುದಕ್ಕಿಂತ ಹೆಚ್ಚಾಗಿ, ಪರಮ ಸತ್ಯದ ಬಗ್ಗೆ ಬೋಧಿಸುವ ಗುರುವನ್ನು "ಪರಮಾತ್ಮ ಸ್ವರೂಪಿ" ಎಂದು ತಿಳಿಯಿರಿ. ಅಂತಹ ಗುರುವಿಗೆ ನೀವು ಶರಣಾದರೆ, ನೀವು ಆತ್ಮಜ್ಞಾನಿಗಳಾಗಬಲ್ಲಿರಿ. ಈ ಪ್ರಪಂಚದಲ್ಲಿ ನೂರಾರು ವರ್ಷಗಳ ಹಿಂದೆ ರಾಜರು ಕಟ್ಟಿದ ಎಷ್ಟೋ ಕೋಟೆಗಳಿದ್ದವು. ಅವು ಈಗ ನಮಗೆ ಕಾಣಿಸುತ್ತಿಲ್ಲ ಎಂದರೆ ಅವು ಸಾಮಾಜಿಕ ಸತ್ಯವೇ ಹೊರತು ಪರಮ ಸತ್ಯವಲ್ಲ. ಏಕೆಂದರೆ ಆ ಕೋಟೆಗಳು ಅಂದು ಇದ್ದವು ಆದರೆ ಇಂದು ಇಲ್ಲ, ಅವು ಅಶಾಶ್ವತವಾದವುಗಳು. ಆದರೆ ಕಾಲಗಳು ಬದಲಾದರೂ, ಯುಗಗಳು ಬದಲಾದರೂ ಬದಲಾಗದಿದ್ದೇ ಪರಮ ಸತ್ಯ; ಆ ಬದಲಾಗದವನೇ ಪರಬ್ರಹ್ಮ. ಈ ಸೃಷ್ಟಿಯಲ್ಲಿ ಪ್ರತಿಯೊಂದೂ ಬದಲಾಗುತ್ತದೆ ಎಂಬುದು ಸತ್ಯವೇ, ಆದರೆ ಅದು ಸಾಮಾಜಿಕ ಸತ್ಯ. ಬದಲಾಗದವನು ಆ ಸೃಷ್ಟಿಕರ್ತ ಎಂಬುದು ಪರಮ ಸತ್ಯ ಎಂದು ತಿಳಿದುಕೊಂಡು, ಆತ್ಮ ಕಾರ್ಯಗಳ ಮೂಲಕ ನಿಮ್ಮ ಹೃದಯವನ್ನು ಶುದ್ಧೀಕರಿಸಿಕೊಂಡು, ಮಾನವ ಜನ್ಮದ ಪರಮಾರ್ಥವಾದ ಭಗವಂತನ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿ. "ಹೃದಯವನ್ನು ಶುದ್ಧಗೊಳಿಸಿ ಶುದ್ಧ ಸ್ವರೂಪವಾದ ಆತ್ಮ ದರ್ಶನವನ್ನು ಪಡೆಯಬೇಕು" ಎಂಬ ಜಿಜ್ಞಾಸೆ ನಿಮ್ಮಲ್ಲಿದ್ದರೆ, ನಿಮ್ಮ ಜೀವನಕ್ಕೆ ಸದ್ಗುರುವು ಬಂದು ನಿಮ್ಮನ್ನು ಪರಮ ಸತ್ಯದ ಕಡೆಗೆ ನಡೆಸಬಲ್ಲರು. ಸದ್ಗುರುಗಳು ನಿರಂತರವಾಗಿ ಧ್ಯಾನ ಮತ್ತು ಜ್ಞಾನವನ್ನು ಬೋಧಿಸುತ್ತಾ, ಆಹಾರ ನಿಯಮಗಳನ್ನು ಹೇಗೆ ಪಾಲಿಸಬೇಕು? ಪ್ರಾಪಂಚಿಕ ವ್ಯವಹಾರಗಳಲ್ಲಿ ಹೇಗೆ ಇರಬೇಕು? ಎಂಬಂತಹ ವಿಷಯಗಳನ್ನು ಸದಾ ಬೋಧಿಸುತ್ತಾ ನಿಮ್ಮನ್ನು ಪರಮ ಸತ್ಯದ ಕಡೆಗೆ ಕರೆದೊಯ್ಯುತ್ತಾರೆ.

ಮಾನವ ಜನ್ಮದ ಪರಮಾರ್ಥ

ಮಾನವ ಜನ್ಮದ ಉದ್ದೇಶವೇನು? ಅಸಲು ಮಾನವ ಜನ್ಮವನ್ನು ಏಕೆ ತಾಳಿದ್ದೇವೆ? ಎಂದು ಪ್ರಶ್ನಿಸಿಕೊಂಡರೆ ನಿಮಗೊಂದು ವಿಷಯ ಅರ್ಥವಾಗುತ್ತದೆ. ಮಾನವನಿಗೆ ಲೌಕಿಕ ಜೀವನ ಮತ್ತು ಆಧ್ಯಾತ್ಮಿಕ ಜೀವನ ಎಂಬ ಎರಡು ಮುಖಗಳಿವೆ.

ಮನುಷ್ಯನು ಲೌಕಿಕ ಜೀವನದಲ್ಲಿರುವಾಗ ತಮೋಗುಣ ಮತ್ತು ರಜೋಗುಣಗಳ ಪ್ರಭಾವದಿಂದ ಕಣ್ಣಿಗೆ ಕಾಣುವುದೆಲ್ಲವೂ ನಿಜವೆಂದು ನಂಬಿ, ಅವುಗಳನ್ನು ಅನುಭವಿಸಬೇಕೆಂದು ಹಂಬಲಿಸುತ್ತಾನೆ. ಯಾವಾಗ ಅವನು ಸಾತ್ವಿಕ ಗುಣಕ್ಕೆ ಬರುತ್ತಾನೋ, ಆಗ ಸತ್ಯವೆಂದರೇನು ಎಂದು ತಿಳಿದುಕೊಂಡು ಸತ್ಯಕ್ಕೆ ಹತ್ತಿರವಾಗುತ್ತಾ ಸೃಷ್ಟಿ ಎಂದರೇನು? ಅದು ಹೇಗೆ ಉಂಟಾಯಿತು? ಯಾರು ಸೃಷ್ಟಿಸಿದರು? ಸೃಷ್ಟಿಯ ಹಿಂದೆ ಯಾರು ಇದ್ದಾರೆ? ಎಂಬ ವಿಷಯಗಳನ್ನು ತಿಳಿದುಕೊಳ್ಳುವ ತಪನೆ (ಹಂಬಲ) ಶುರುವಾಗುತ್ತದೆ. ಆಗ ತನ್ನ ಜೀವನದಲ್ಲಿ ಒಬ್ಬ ಸದ್ಗುರು ಬಂದರೆ ಮಾತ್ರ ಇವೆಲ್ಲವನ್ನೂ ತಿಳಿದುಕೊಳ್ಳಲು ಸಾಧ್ಯ ಎಂದು ಅರ್ಥಮಾಡಿಕೊಳ್ಳುತ್ತಾನೆ.

ನಾವು ಲೌಕಿಕ ಜೀವನದಲ್ಲಿ ಪರಿಮಿತ ಜ್ಞಾನದಿಂದ ಇರುವುದರಿಂದ, ಲೌಕಿಕ ವಿಷಯಗಳ ಮೇಲೆ ಆಸಕ್ತಿ ತೋರಿಸುತ್ತಾ ಅವುಗಳಿದ್ದರೆ ಸಂತೋಷವಾಗಿ, ಸುಖವಾಗಿ ಇರಬಹುದು ಎಂಬ ಅಭಿಪ್ರಾಯದಲ್ಲಿ ಇರುತ್ತೇವೆ. ಆದರೆ ಅವೆಲ್ಲವೂ ಅಶಾಶ್ವತ ಎಂದು ಯಾವಾಗ ತಿಳಿದುಕೊಳ್ಳುತ್ತಾರೋ! ಸಂಪೂರ್ಣವಾದ ಸುಖ, ಶಾಂತಿ ಮತ್ತು ಪ್ರೇಮ ಎಂಬವುಗಳು ಸಂಪೂರ್ಣ ಜ್ಞಾನವನ್ನು ಪಡೆದಾಗ ಮಾತ್ರವೇ ದೊರೆಯುತ್ತವೆ ಎಂದು ನಿಮ್ಮ ಜೀವನದಲ್ಲಿ ಒಬ್ಬ ಸದ್ಗುರುವಿನ ಮೂಲಕವೇ ತಿಳಿದುಕೊಳ್ಳುತ್ತೀರಿ.

ಲೌಕಿಕ ಜೀವನಕ್ಕಿಂತ ಆಧ್ಯಾತ್ಮಿಕ ಜೀವನ ಶ್ರೇಷ್ಠವೆಂದು, ಸೃಷ್ಟಿಗಿಂತ ಸೃಷ್ಟಿಕರ್ತ ದೊಡ್ಡವನೆಂದು ಕೆಲವು ಶಿಷ್ಯರು ಮಾತ್ರವೇ ತಿಳಿದುಕೊಳ್ಳಬಲ್ಲರು. ಏಕೆಂದರೆ ಗುರುಗಳ ಬಳಿಗೆ ಬರುವವರಲ್ಲಿ ಕೆಲವರು ಲೌಕಿಕ ಲಾಭಗಳನ್ನು ಆಶಿಸಿ ಬರುತ್ತಾರೆ, ಇನ್ನು ಕೆಲವರು ಮಾತ್ರ ಆತ್ಮಜ್ಞಾನ ಪಡೆಯಬೇಕೆಂದು ಗುರುಗಳನ್ನು ಆಶ್ರಯಿಸುತ್ತಾರೆ. ಮತ್ತು ಹಾಗೆ ಗುರುಗಳ ಬಳಿಗೆ ಸೇರಿದಾಗ ಈ ದುಃಖಗಳಿಗೆ ಕಾರಣ ಏನು? ಎಂಬ ಒಂದು ಪರಮ ಸತ್ಯವನ್ನು ತಿಳಿದುಕೊಳ್ಳುತ್ತಾರೆ. ಲೌಕಿಕ ಜೀವನದಲ್ಲಿ ನಮಗೆ ಯಾವಾಗಲೂ ಭಯ,

ಚಿಂತೆ, ಉದ್ವೇಗ ಎಂಬವು ಇರುತ್ತವೆ. ಅವುಗಳ ಬಗ್ಗೆ ಸ್ವಲ್ಪ ವಿವರವಾಗಿ ತಿಳಿದುಕೊಳ್ಳೋಣ.

⏭ **ಭಯ:** ಭಯ ಎನ್ನುವುದು ಹೇಗಿರುತ್ತದೆ ಎಂದರೆ ಸತ್ತು ಹೋಗುತ್ತೇವೆಯೇನೋ ಎಂಬ ಭಯ, ನನ್ನ ಹತ್ತಿರ ಇರುವುದನ್ನು ಯಾರಾದರೂ ಕಿತ್ತುಕೊಳ್ಳುತ್ತಾರೋ ಎಂಬ ಭಯ, ಪದವಿಗಳು (ಅಧಿಕಾರ) ಹೋಗುತ್ತವೆ ಎಂಬ ಭಯ, ಟ್ಯಾಕ್ಸ್ ಕಟ್ಟಲು ಆಗುವುದಿಲ್ಲವೇನೋ ಎಂಬ ಭಯ, ಸಂಪಾದಿಸಿದ ಹಣವನ್ನು ಮಕ್ಕಳು ಹಾಳು ಮಾಡುತ್ತಾರೋ ಎಂಬ ಭಯ... ಹೀಗೆ ಅನೇಕ ಬಗೆಯ ಭಯಗಳು ಇರುತ್ತವೆ. ಚಿಕ್ಕ ಮಕ್ಕಳಿಗೆ ಒಂದು ರೀತಿಯ ಭಯ, ಮಧ್ಯ ವಯಸ್ಸಿನವರಿಗೆ ಒಂದು ರೀತಿಯ ಭಯ, ಮುದಿ ವಯಸ್ಸಿನವರಿಗೆ ಒಂದು ರೀತಿಯ ಭಯ. ಹೀಗೆ ವಿಧವಿಧವಾಗಿ ಇರುತ್ತವೆ. ಇಂತಹ ಭಯಗಳಿಗೆ ಮುಖ್ಯ ಕಾರಣ, ಲೌಕಿಕ ಜೀವನದಲ್ಲಿ ಏನೇ ಸಮಸ್ಯೆ ಬಂದರೂ 'ವಿಚಾರಣೆ' (ವಿವೇಚನೆ/ಆಲೋಚನೆ) ಇಲ್ಲದೆ 'ವಿಚಾರ'ದಲ್ಲಿ (ದುಃಖ/ಚಿಂತೆ) ಇರುವುದೇ ಆಗಿದೆ. ಯಾವಾಗ ವಿಚಾರಣೆ ಇರುತ್ತದೆಯೋ, ಆಗ ವಿಚಾರ (ದುಃಖ) ಇರುವುದಿಲ್ಲ.

⏭ **ಚಿಂತೆ:** ನಿಮ್ಮ ಜೊತೆಗೆ ಬಾರದ ವಿಷಯಗಳಿಗಾಗಿ ತವಕಪಡುವುದೇ ದೊಡ್ಡ ಚಿಂತೆ. ಇಲ್ಲದ ವಿಷಯಗಳ ಬಗ್ಗೆ ಯಾವಾಗಲೂ ಆಲೋಚಿಸುತ್ತಿರುತ್ತಾರೆ. ನಿಮಗೆ ಎಷ್ಟೇ ಇದ್ದರೂ, ಪಕ್ಕದವನ ಹತ್ತಿರ ನಿಮಗಿಂತ ಒಂದು ವಸ್ತು ಹೆಚ್ಚಾಗಿದ್ದರೆ ನೀವು ಚಿಂತೆಯಲ್ಲಿ ಮುಳುಗಿ ಹೋಗುತ್ತೀರಿ. ಅಂದರೆ, ಇರುವುದರಲ್ಲಿ ತೃಪ್ತಿ ಇಲ್ಲದ ಜೀವನ ಯಾವಾಗಲೂ ಚಿಂತೆಯಲ್ಲೇ ಇರುತ್ತದೆ ಎಂದು ಅರ್ಥಮಾಡಿಕೊಳ್ಳಬಹುದು. ಲೌಕಿಕ ಜೀವನದಲ್ಲಿ "ನನಗೆ ಎಲ್ಲವೂ ಇದೆ, ನಾನು ಚೆನ್ನಾಗಿದ್ದೇನೆ, ನಾನು ತೃಪ್ತಿಯಾಗಿದ್ದೇನೆ" ಎಂಬ ಮಾತು ಯಾರ ಬಾಯಿಂದಲೂ ಬರುವುದಿಲ್ಲ. "ಇನ್ನೂ ಇದ್ದರೆ ಚೆನ್ನಾಗಿರುತ್ತಿತ್ತು" ಎಂದೇ ಅಂದುಕೊಳ್ಳುತ್ತಾರೆ.

⏭ **ಉದ್ವೇಗ:** ಯಾವುದೇ ಕೆಲಸವನ್ನು ಪ್ರಾರಂಭಿಸಿದರೂ ಅದು ಯಶಸ್ವಿಯಾಗುತ್ತದೋ ಇಲ್ಲವೋ ಎಂಬ ಉದ್ವೇಗ ಈ ಮೂರೂ ಲೌಕಿಕ ಜೀವನದಲ್ಲಿ ಇರುತ್ತವೆ. ನಿಮ್ಮ ಜೀವನಕ್ಕೆ ಸದ್ಗುರುಗಳು ಬಂದಾಗ, ಈ ಭಯಗಳು, ಚಿಂತೆಗಳು ಮತ್ತು ಉದ್ವೇಗಗಳೆಲ್ಲವೂ ತಾತ್ಕಾಲಿಕ ಎಂದು ತಿಳಿದುಕೊಳ್ಳುತ್ತೀರಿ.

ಈ ಮೂರೂ ಲೌಕಿಕ ಜೀವನದಲ್ಲಿ ಇರುತ್ತವೆ. ನಿಮ್ಮ ಜೀವನಕ್ಕೆ ಸದ್ಗುರುಗಳು ಬಂದಾಗ, ಈ ಭಯಗಳು, ಚಿಂತೆಗಳು ಮತ್ತು ಉದ್ವೇಗಗಳೆಲ್ಲವೂ ತಾತ್ಕಾಲಿಕ ಎಂದು ನಿಮಗೆ ಅರ್ಥವಾಗುತ್ತದೆ. ನೀವು ಎಷ್ಟೇ ಆತಂಕಪಟ್ಟರೂ, ಎಷ್ಟೇ ಭಯದಿಂದ ಬಚ್ಚಿಟ್ಟುಕೊಂಡರೂ ಅಥವಾ ಎಷ್ಟೇ ಚಿಂತೆಯಲ್ಲಿದ್ದರೂ, ನಿಮ್ಮ ಜೀವನದಲ್ಲಿ ನಡೆಯುವುದೆಲ್ಲವೂ ನಿಮ್ಮ ಕರ್ಮಾನುಸಾರವೇ ನಡೆಯುತ್ತವೆ ಎಂದು ನೀವು ತಿಳಿಯುತ್ತೀರಿ. ಅಂತಿಮವಾಗಿ ಮರಣವೂ ಸಹ, ನೀವು ಜನ್ಮ ತಾಳಿದಾಗಲೇ ಎಷ್ಟು ಕಾಲ ಬದುಕಿರಬೇಕು ಎಂದು ನಿರ್ಧರಿಸಿಕೊಂಡೇ ಬಂದಿರುತ್ತೀರಿ ಎಂಬುದು ಆಧ್ಯಾತ್ಮಿಕ ಜೀವನಕ್ಕೆ ಬಂದ ಮೇಲೆ ಅರ್ಥವಾಗುತ್ತದೆ.

ಈ ಆಧ್ಯಾತ್ಮಿಕ ಜೀವನಕ್ಕೆ ಬಂದ ಮೇಲೂ ಇನ್ನೂ ಮರಣ ಭಯವಿದೆ ಎಂದರೆ, ಗುರುಗಳು ನೀಡಿದ ಜ್ಞಾನ ನಿಮಗೆ ಸರಿಯಾಗಿ ಅರ್ಥವಾಗಿಲ್ಲ ಎಂದು ತಿಳಿಯಬೇಕು. ಗುರುಗಳು ನಿಮ್ಮ ಜೀವನಕ್ಕೆ ಬರುವುದೇ ಮರಣ ಭಯವನ್ನು ಹೋಗಲಾಡಿಸಲು. ಗುರುಗಳು ಹೇಳಿದ ಜ್ಞಾನವನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಮರಣ ಭಯ ಮತ್ತು ಚಿಂತೆ ಇರುವುದಿಲ್ಲ.

ನಿಮ್ಮ ಪ್ರಾಪ್ತಿಯಲ್ಲಿ (ವಿಧಿಯಲ್ಲಿ) ಇರುವುದೇ ನಿಮಗೆ ಸಿಗುತ್ತದೆ ಹೊರತು, ಇಲ್ಲದಿರುವುದು ಯಾವುದೂ ಬರುವುದಿಲ್ಲ ಎಂದು ಗುರುಗಳು ಹೇಳಿದಾಗ; ಯಾವುದಾದರೂ ಸಿಗದಿದ್ದರೂ ಸಹ, "ಓ, ನಾನು ಮೇಲಿನಿಂದ ಬರುವಾಗಲೇ ಇದನ್ನು ನನಗೆ ಬೇಕು ಎಂದು ಅಂದುಕೊಂಡಿರಲಿಲ್ಲ, ಆದ್ದ-ರಿಂದ ನಾನು ಎಷ್ಟೇ ಪ್ರಯತ್ನಿಸಿದರೂ ನನಗೆ ಸಿಗಲಿಲ್ಲ" ಎಂದು ಚಿಂತೆಯಿಲ್ಲದೆ ಇರುತ್ತೀರಿ.

ಇನ್ನೂ ಕೆಲವರು ಪ್ರತಿಯೊಂದಕ್ಕೂ ಆತುರಪಡುತ್ತಿರುತ್ತಾರೆ. ಯಾವುದಾದರೂ ಸಮಸ್ಯೆ ಬಂದಾಗ "ನನಗೇ ಏಕೆ ಬಂತು? ನನಗೇಕೆ ಹೀಗಾಗುತ್ತಿದೆ? ಅಸಲು ನಾನು ಅಂದುಕೊಂಡ ಕೆಲಸ ಆಗುತ್ತದೆಯೇ ಅಥವಾ ಇಲ್ಲವೇ?" ಎಂಬ ಸಂಶಯದಲ್ಲಿ ಇರುತ್ತಾರೆ. ಅಂತಹ ಸಂಶಯವುಳ್ಳವನಿಗೆ ಉದ್ವೇಗ ಹೆಚ್ಚಾಗಿರುತ್ತದೆ. ಆದರೆ ಜ್ಞಾನ ಪಡೆದವನು, ಆ ಕೆಲಸ ಆಗಲಿಲ್ಲವೆಂದರೆ "ಅದಕ್ಕಿಂತ ಒಳ್ಳೆಯದು ಇನ್ನೊಂದು ಇರಬಹುದೇನೋ" ಎಂದು ಭಾವಿಸುತ್ತಾನೆ ಹೊರತು ಸಂಶಯಪಡುವುದಿಲ್ಲ. ಆಧ್ಯಾತ್ಮಿಕತೆಗೆ ಬಂದವನು, ಈ ದುರ್ಗುಣಗಳು, ಭಯ, ಚಿಂತೆ ಮತ್ತು ಉದ್ವೇಗಗಳೆಲ್ಲವೂ ಮಾನಸಿಕ ರೋಗಗಳು ಎಂದು ಜ್ಞಾನ ಪಡೆದ ನಂತರ ತಿಳಿಯುತ್ತಾನೆ.

ಹಾಗೆ ಸತ್ಯವು ಅರಿವಾದಾಗ, ಈ ಸೃಷ್ಟಿಯೆಲ್ಲವೂ ಭಗವಂತನದ್ದೇ ಎಂದು ಅರ್ಥವಾದಾಗ ಮತ್ತು "ನನ್ನದು" ಎನ್ನುವುದು ಯಾವುದೂ ಇಲ್ಲ ಎಂದು ತಿಳಿದಾಗ, ಮನುಷ್ಯನು ಯಾವುದೇ ವಿಷಯಕ್ಕೆ ಭಯಪಡುವುದಿಲ್ಲ, ಚಿಂತಿಸುವುದಿಲ್ಲ ಅಥವಾ ಉದ್ವೇಗಕ್ಕೆ ಒಳಗಾಗುವುದಿಲ್ಲ. ಆಧ್ಯಾತ್ಮಿಕ ಜೀವನಕ್ಕೆ ಬಂದಾಗ, ಲೌಕಿಕ ಜೀವನದಲ್ಲಿ ನೀನು ಯಾವುದನ್ನು ಬಯಸಿದ್ದೆಯೋ ಅಂದರೆ ಶುಭವಾಗಿ, ಸಂತೋಷವಾಗಿ, ಶಾಂತಿಯಿಂದ ಇರಬೇಕು ಮತ್ತು ಸ್ವತಂತ್ರವಾಗಿರಬೇಕು ಎಂಬ ಕೋರಿಕೆಗಳು ಆಧ್ಯಾತ್ಮಿಕ ಜೀವನದಲ್ಲಿ ವಾಸ್ತವ ರೂಪವನ್ನು ಪಡೆಯುತ್ತವೆ.

ಗುರುವಿನ ಮೂಲಕ ನೀನು "ದೇಹವಲ್ಲ ಆತ್ಮ" ಎಂದು ತಿಳಿಯುತ್ತೀಯ. ಆತ್ಮಕ್ಕೆ ಈ ದೇಹವು ಕೇವಲ ಒಂದು ಕವಚವಷ್ಟೇ. ನಿನ್ನ ಶರೀರಕ್ಕೆ ಬಟ್ಟೆ ಹೇಗೋ, ಹಾಗೆಯೇ ಆತ್ಮಕ್ಕೆ ಈ ದೇಹವು ಒಂದು ಹೊದಿಕೆ ಎಂದು ತಿಳಿದುಕೊಳ್ಳುತ್ತೀಯ. ಆತ್ಮ ಎಂದರೆ ನಿನ್ನ ಕಣ್ಣಿಗೆ ಕಾಣಿಸದ ಶಕ್ತಿ ಎಂದು ತಿಳಿದುಕೊಳ್ಳಬಹುದು.

ನಿನ್ನ ಶರೀರದಲ್ಲಿರುವ ಅಣುಮಾತ್ರದ ಆತ್ಮವು ನಿನ್ನ ಶರೀರವನ್ನು ನಡೆಸುತ್ತಿದೆ; ಬ್ರಹ್ಮಾಂಡದಾದ್ಯಂತ ಇರುವ ಪರಮಾತ್ಮನು ಈ ಸೃಷ್ಟಿಯನ್ನು ನಡೆಸುತ್ತಿದ್ದಾನೆ ಎಂದು ಗುರುವಿನ ಆಗಮನದ ನಂತರ ತಿಳಿದುಕೊಂಡು, ನಿನ್ನ ಜೀವನದ ಪರಮ ಉದ್ದೇಶವೇನೆಂದು ಅರ್ಥಮಾಡಿಕೊಳ್ಳುತ್ತೀಯ. ಈ ಮಾನವ ಜನ್ಮ ಏಕಪ್ಪಾ ಎಂದರೆ **"ನಿನ್ನನ್ನು ಸೃಷ್ಟಿಸಿದವನನ್ನು, ನಿನಗೆ ಜೀವ ನೀಡಿದವನನ್ನು ತಿಳಿದುಕೊಳ್ಳಲು ಸೂಕ್ತವಾದುದೇ ಈ ಮಾನವ ಜನ್ಮ"** ಎಂದು ಅರಿಯುತ್ತೀಯ. ಇದನ್ನು ತಿಳಿದುಕೊಂಡರೆ ಮರುಜನ್ಮವಿರುವುದಿಲ್ಲ. ಜನ್ಮವಿದ್ದ ಮೇಲೆ ದುಃಖ ಇದ್ದೇ ಇರುತ್ತದಲ್ಲವೇ? ದುಃಖದಿಂದ ಶಾಶ್ವತವಾಗಿ ಮುಕ್ತಿ ಪಡೆಯಬೇಕೆಂದರೆ, ನಿನ್ನನ್ನು ಸೃಷ್ಟಿಸಿದವನನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು.

ಬಹಳಷ್ಟು ಜನರು "ನಾನು ಅನುಭವಿಸುವುದಕ್ಕಾಗಿಯೇ ಈ ಭೂಮಿಗೆ ಬಂದಿದ್ದೇನೆ" ಎಂದು ಅಂದುಕೊಳ್ಳುತ್ತಾರೆ. ಕಷ್ಟಗಳನ್ನು ಅನುಭವಿಸುತ್ತಾ, ಕೆಲವು ವಸ್ತುಗಳನ್ನು ಪಡೆಯುತ್ತಾ, ಇನ್ನು ಕೆಲವು ಸಿಗದಿದ್ದಾಗ "ಈ ಜೀವನವೆಲ್ಲಾ ದುಃಖಮಯವಾಗಿದೆ, ದುಃಖ ಬಿಟ್ಟರೆ ಈ ಜೀವನದಲ್ಲಿ ಇನ್ನೇನೂ ಇಲ್ಲ" ಎನ್ನುತ್ತಾರೆ. ಅದಕ್ಕೆ ಕಾರಣ, ಆನಂದ ಸ್ವರೂಪಿಯಾದ ಆ ಪರಮಾತ್ಮನು

ತನ್ನೊಳಗೇ ಇದ್ದಾನೆ ಎಂಬುದು ತಿಳಿಯದಿರುವುದು. ಆದರೆ ಅದನ್ನು ತಿಳಿದುಕೊಂಡರೆ ಜೀವನವು ಆನಂದಮಯವಾಗುತ್ತದೆ.

ಆಧ್ಯಾತ್ಮಿಕ ಜೀವನಕ್ಕೆ ಬಂದ ನಂತರ, ನಾನು ಕೇವಲ ಈ ಶರೀರವಲ್ಲ **'ಆತ್ಮ'** ಎಂದು ತಿಳಿದುಕೊಂಡು, ನನ್ನ ಜೀವನದಲ್ಲಿ ಯಾವುದು ಅನಾವಶ್ಯಕ ಮತ್ತು ಯಾವುದು ಅನವಶ್ಯಕ ಎಂದು ಗ್ರಹಿಸಲು **ವಿವೇಕ** ಹಾಗೂ **ವೈರಾಗ್ಯ** ಎರಡೂ ಇರಬೇಕೆಂದು ತಿಳಿದುಕೊಳ್ಳಬೇಕು. ವಿವೇಕವಿಲ್ಲದವನು ಕೇವಲ ಲೌಕಿಕ ವಸ್ತುಗಳಿಂದಲೇ ಸುಖ ಸಿಗುತ್ತದೆ ಎಂಬ ಭ್ರಾಂತಿಯಲ್ಲಿರುತ್ತಾನೆ. ಆ ಭ್ರಾಂತಿಯಲ್ಲಿರುವವನಿಗೆ ಆ ವಸ್ತುಗಳು ಸಿಕ್ಕಿದರೂ ಕೂಡ ದುಃಖ ತಪ್ಪಿದ್ದಲ್ಲ.

ಪತ್ರೀಜಿಯವರಂತಹ ಗುರುಗಳು ಲಭಿಸಿದಾಗ, ಧ್ಯಾನದಿಂದ ಜ್ಞಾನ, ಜ್ಞಾನದಿಂದ ಮೋಕ್ಷ ಎಂದು ತಿಳಿದುಕೊಳ್ಳುತ್ತೇವೆ. **ಮೋಕ್ಷ ಎಂದರೆ ಬದುಕಿರುವಾಗ ಆನಂದವಾಗಿರುವುದು ಮತ್ತು ಮರಣದ ನಂತರ ಮರುಜನ್ಮವಿಲ್ಲದೆ ಇರುವುದು.** ಆದರೆ ಕೆಲವರು ಧ್ಯಾನ ಎಂದರೆ ಕೇವಲ ಕೋರಿಕೆಗಳನ್ನು ಈಡೇರಿಸಿಕೊಳ್ಳಲು ಎಂದು ಭಾವಿಸುತ್ತಾರೆ. ಸಂಕಲ್ಪ ಮಾಡಿ ಧ್ಯಾನ ಮಾಡಿದರೆ ಕೋರಿಕೆಗಳು ತೀರುತ್ತವೆ ಎಂದು ಮಾತ್ರ ತಿಳಿದಿದ್ದಾರೆ. ಆದರೆ ಆಸೆಗಳೇ ದುಃಖಕ್ಕೆ ಮೂಲ ಎಂದು ಅವರಿಗೆ ತಿಳಿಯದು. ಧ್ಯಾನವು ಆತ್ಮಜ್ಞಾನ ಪಡೆಯುವುದಕ್ಕಾಗಿಯೇ ಹೊರತು ಲೌಕಿಕ ಲಾಭಗಳಿಗಾಗಿ ಅಲ್ಲ. ಈಗ ನೀವು ಹಣವನ್ನು ಸಂಪಾದಿಸುತ್ತೀರಿ; ಆ ಹಣವನ್ನು ಪುಣ್ಯ ಕಾರ್ಯಗಳಿಗೆ ಬಳಸಿದರೆ ಭೋಗವು ಲಭಿಸುತ್ತದೆ ಮತ್ತು ಮರುಜನ್ಮದಲ್ಲಿ ಆನಂದವಾಗಿ ಜೀವಿಸುತ್ತೀರಿ. ಹಾಗಲ್ಲದೆ ಆ ಹಣವನ್ನು ದುಶ್ಚಟಗಳಿಗೆ ಬಳಸಿದರೆ ದಾರಿದ್ರ್ಯದ ಜೀವನವನ್ನು ಅನುಭವಿಸಬೇಕಾಗುತ್ತದೆ.

ಈ ಭೂಮಿಯ ಮೇಲೆ ನೀನು ಪಡೆಯಲಾಗದ್ದು ಅಥವಾ ಸಾಧಿಸಲಾಗದ್ದು ಯಾವುದೂ ಇಲ್ಲ. ಆದರೆ ಸರಿಯಾದ **"ಶ್ವಾಸದ ಮೇಲೆ ಧ್ಯಾಸ"** (ಉಸಿರಾಟದ ಮೇಲೆ ಗಮನ) ಇರಿಸಿ ಧ್ಯಾನ ಮಾಡಬೇಕು. ಅಂತಿಮವಾಗಿ ತಿಳಿದುಕೊಳ್ಳಬೇಕಾದುದು ಜ್ಞಾನ. ಆ ಜ್ಞಾನ ಲಭಿಸಿದಾಗ **"ನನ್ನದೂ ಅಂತ ಏನೂ ಇಲ್ಲ, ಇದೆಲ್ಲವೂ ಪರಮಾತ್ಮನದೇ" ಎಂಬುದು ನಿನಗೆ ಅರ್ಥವಾಗುತ್ತದೆ. ಈ ಜೀವನವು "ನಾನು ಯಾರು?"** ಎಂದು ತಿಳಿದುಕೊಳ್ಳಲು ಮತ್ತು ಈ ಜೀವನವನ್ನು ಕೊಟ್ಟವನನ್ನು ಅರಿಯಲು ಲಭಿಸಿದೆ ಎಂದು ಅರ್ಥಮಾಡಿಕೊಳ್ಳಬೇಕು.

ಮಾನವ ಜನ್ಮದ ಪರಮಾರ್ಥವೇನೆಂದರೆ ಈ ಸೃಷ್ಟಿಗೆ ಕಾರಣ ಯಾರು? ಈ ಜೀವಿಗಳ ಜನ್ಮಕ್ಕೆ ಕಾರಣ ಯಾರು? ನನ್ನ ಜೀವನದ ದಾತ ಯಾರು? ಎನ್ನುವುದನ್ನು ತಿಳಿದುಕೊಳ್ಳುವುದೇ ಮುಖ್ಯ. ನೀನು ವಿಚಾರಣೆಯ ಮೂಲಕ ಆ ಸತ್ಯವನ್ನು ತಿಳಿದುಕೊಂಡಾಗ, ಈ ಸೃಷ್ಟಿ ಏನೆಂದು ಅರ್ಥವಾಗುತ್ತದೆ. ಆದರೆ ನೀವು ಯಾವಾಗಲೂ ಮಾಯೆಯಲ್ಲಿ ಬಿದ್ದುಹೋಗುತ್ತೇವೆಯೇನೋ ಎಂದು ಗಮನಿಸಿಕೊಳ್ಳುತ್ತಿರಬೇಕು. ಮಾಯೆಯಲ್ಲಿ ಬಿದ್ದರೆ ಈ ಪ್ರಪಂಚವೇ ನಾನು ಎಂದು ಅಂದುಕೊಂಡು ದುಃಖಕ್ಕೆ ಒಳಗಾಗುತ್ತೀರಿ. ಈ ಮಾಯೆ ಎನ್ನುವುದನ್ನು ನೀನು ಸರಿಯಾದ ಸಾಧನೆ ಮಾಡಿ ಜ್ಞಾನ ಪಡೆದರೆ, ಮಾಯೆಯಲ್ಲಿ ಬೀಳುವುದಿಲ್ಲ. ಪರಮಾತ್ಮನಿಗಾಗಿ ಧ್ಯಾನ ಮಾಡಿದವನಿಗೆ ಆತನ ಅನುಗ್ರಹದಿಂದ ಈ ಲೋಕದಲ್ಲಿ ಆನಂದವಾಗಿ ಜೀವಿಸಿ, ಜನ್ಮಗಳಿಲ್ಲದ ಸ್ಥಿತಿಯನ್ನು (ಮೋಕ್ಷ) ತಲುಪುತ್ತಾನೆ. ಹಾಗೆ ಸಾಧನೆ ಮಾಡುತ್ತಾ ಹೋದಂತೆ, ಈ ಭೂಮಿಯ ಮೇಲೆ ನನ್ನ ಏಕೈಕ ಕೋರಿಕೆ, ನನ್ನ ಏಕೈಕ ಗುರಿ ಪರಮಾತ್ಮನನ್ನು ತಿಳಿದುಕೊಳ್ಳುವುದೇ ಎಂದು ಅರಿವಾಗುತ್ತದೆ.

ಅದಕ್ಕೆ ಪರಾ ವಿದ್ಯೆಯಾದ ಆತ್ಮ ವಿದ್ಯೆ, ಬ್ರಹ್ಮ ವಿದ್ಯೆಯನ್ನು ಕಲಿತಾಗ ಮಾತ್ರ ತಿಳಿಯುತ್ತದೆ. ಸಾಧನೆ ತೀವ್ರವಾದಾಗ 'ನಾನು ಯಾರು' ಎಂಬುದು ತಿಳಿಯುತ್ತದೆ ಮತ್ತು ಸೃಷ್ಟಿಯನ್ನು ಯಾರು ಸೃಷ್ಟಿಸಿದರು ಎಂಬುದು ಅರ್ಥವಾಗುತ್ತದೆ. ಭೀಮವರಂನಲ್ಲಿ ಪ್ರತಿ ತಿಂಗಳ 1, 2, 3 ತಾರೀಖುಗಳಲ್ಲಿ ನಡೆಯುವ ಆತ್ಮಜ್ಞಾನ ಶಿಕ್ಷಣ ತರಗತಿಗಳಾಗಲಿ, ಅಥವಾ ಪ್ರತಿದಿನ ಬೆಳಿಗ್ಗೆ ನಡೆಯುವ ಜೂಮ್ (Zoom) ಸಾಧನಾ ತರಗತಿಗಳಾಗಲಿ, ಜ್ಞಾನದ ಕ್ಲಾಸ್ಗಳಾಗಲಿ... ಇವೆಲ್ಲವೂ ಸಾಧನೆಯನ್ನು ಹೆಚ್ಚಿಸಿಕೊಳ್ಳಲು ಮತ್ತು ಆತ್ಮಾನುಭೂತಿಯನ್ನು ಪಡೆಯಲು ಮಾತ್ರವೇ. ಇಂತಹ ತೀವ್ರ ಸಾಧನೆಯಿಂದ ನಿಮ್ಮ ಜೀವನದ ಪರಮಾರ್ಥವನ್ನು ತಿಳಿದುಕೊಳ್ಳುತ್ತೀರಿ, ಆ ಸೃಷ್ಟಿಕರ್ತನ ಬಗ್ಗೆ ತಿಳಿದುಕೊಳ್ಳುತ್ತೀರಿ. ಈ ಪ್ರಪಂಚದಲ್ಲಿ ನೂರಕ್ಕೊಬ್ಬರೋ, ಕೋಟಿಗೊಬ್ಬರೋ ಆ ಪರಮಾತ್ಮನಿಗಾಗಿ ಪ್ರಯತ್ನಿಸುತ್ತಾರೆ. ಆಲೋಚಿಸಿ! ಆ ಪರಮಾತ್ಮನಿಗಾಗಿ ಮಾಡುವ ಪ್ರಯತ್ನದಲ್ಲೇ ಇಷ್ಟೊಂದು ಆನಂದವಿದ್ದರೆ, ನಿಜವಾಗಿ ಪರಮಾತ್ಮನನ್ನು ಸೇರಿದಾಗ ಇನ್ನೆಷ್ಟು ಆನಂದವಿರುತ್ತದೆ ಎಂದು ಊಹಿಸಿಕೊಳ್ಳಿ.

ವ್ಯಕ್ತ – ಅವ್ಯಕ್ತ

ನೀವು ಆತ್ಮವೆಂದು ತಿಳಿದುಕೊಳ್ಳಲು ಮತ್ತು ಆತ್ಮವನ್ನು ಹೊಂದಲು ಪ್ರತಿದಿನ ಎಷ್ಟೋ ಸಾಧನೆ ಮಾಡುತ್ತಿದ್ದೀರಿ, ಎಷ್ಟೋ ಜ್ಞಾನವನ್ನು ಕಲಿಯುತ್ತಿದ್ದೀರಿ. ಆದರೆ ಯಾರೇ ಆಗಲಿ ಮನಸ್ಸು ಮಲಿನವಾಗಿರುವವರೆಗೆ 'ನಾನು ಆತ್ಮ' ಎಂದು

ತಿಳಿದುಕೊಳ್ಳಲಾರರು, ಆತ್ಮ ಸಾಕ್ಷಾತ್ಕಾರ ಪಡೆಯಲಾರರು. ಆದರೆ ನೀವು ಈ ಮಾರ್ಗಕ್ಕೆ ಬಂದ ನಂತರ ಭಗವಂತನ ಬಗ್ಗೆ ಎಷ್ಟೋ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದೀರಿ.

ಲೋಕದಲ್ಲಿ ಭಗವಂತನಿದ್ದಾನೆ ಎಂದು ಕೆಲವರು, ಭಗವಂತನಿಲ್ಲ ಎಂದು ಕೆಲವರು ಅಂದುಕೊಳ್ಳುತ್ತಿರುತ್ತಾರೆ. ಅಸಲು ಭಗವಂತನಿದ್ದಾನಾ? ಇಲ್ಲವಾ? ಇದ್ದರೆ ಆ ಭಗವಂತನು ಸಗುಣನಾ? ನಿರ್ಗುಣನಾ? ಕಾಣಿಸುತ್ತಾನಾ? ಕಾಣಿಸುವುದಿಲ್ಲವೇ? ಎಂದು ಎಷ್ಟೋ ಸಂದೇಹಗಳು ಬರುತ್ತವೆ. ಈ ಧ್ಯಾನಮಾರ್ಗಕ್ಕೆ ಬಂದ ನಿಮಗೆ, ನಿಮ್ಮ ಜ್ಞಾನದ ಪರಿಧಿ ಹೆಚ್ಚಾದಂತೆಲ್ಲಾ ಎಲ್ಲಾ ರೂಪಗಳು ಆತನದ್ದೇ, ಎಲ್ಲವೂ ಆತನೇ ಎಂದು ಅರ್ಥಮಾಡಿಕೊಳ್ಳುವ ಸ್ಥಿತಿಗೆ ಬೆಳೆಯುತ್ತೀರಿ. ಅದಕ್ಕಾಗಿಯೇ ಅವ್ಯಕ್ತ ಎಂಬುದು ವ್ಯಕ್ತವಾಗುವುದು ಹೇಗೆ? ಎಂಬುದನ್ನು ತಿಳಿದುಕೊಳ್ಳೋಣ. ಭಗವಂತನನ್ನು ಐದು ರೂಪಗಳಾಗಿ ಹೇಳಬಹುದು. ಅವುಗಳೆಂದರೆ: ಅಸ್ತಿ, ಭಾತಿ, ಪ್ರಿಯಂ, ನಾಮ, ರೂಪ. ಇವು ಭಗವಂತನ ಐದು ರೂಪಗಳು.

1) ಅಸ್ತಿ (ಸತ್): ಅಸ್ತಿ ಎಂದರೆ ಇರುವುದು, ವಾಸ್ತವವಾದದ್ದು, ಸತ್ಯವಾದದ್ದು, ಶಾಶ್ವತವಾದದ್ದು ಎಂದು ಅರ್ಥ. ಈ ಮಾರ್ಗಕ್ಕೆ ಬಂದ ನೀವು ಭಗವಂತನೆಂದರೆ ನಾಮ, ರೂಪ ರಹಿತನೆಂದು, ಸಚ್ಚಿದಾನಂದ ಸ್ವರೂಪನೆಂದು ತಿಳಿದುಕೊಂಡಿದ್ದೀರಿ. ಅಂದರೆ ಆ ಭಗವಂತನು ಶಾಶ್ವತವಾದವನು, ಸತ್ಯವಾದವನು, ಚೈತನ್ಯ ಸ್ವರೂಪನು, ಆನಂದ ಸ್ವರೂಪನು ಎಂದು ತಿಳಿದುಕೊಂಡಿದ್ದೀರಿ. ಅದಕ್ಕಾಗಿಯೇ 'ಅಸ್ತಿ' ಎಂದಿದ್ದಾರೆ.

2) ಭಾತಿ (ಚಿತ್): ಭಾತಿ ಎಂದರೆ ಚೈತನ್ಯವಂತವಾದದ್ದು ಎಂದು ಅರ್ಥ. ಭಗವಂತನೆಂದರೆ ಸಚ್ಚಿದಾನಂದ ಸ್ವರೂಪನೆಂದು ಹೇಳುತ್ತಾರೆ. ಚಿತ್ ಎಂದರೆ ಚೈತನ್ಯವಂತವಾದ. ಈ ಗುಣವು ಬ್ರಹ್ಮನನ್ನು ಗುರುತಿಸಲು ಸಹಾಯ ಮಾಡುತ್ತದೆ. 'ಭಾತಿ' ಎಂದರೆ ಸೃಷ್ಟಿಯ ಪ್ರತಿಯೊಂದಕ್ಕೂ ಚೈತನ್ಯವಿದೆ ಎಂದರ್ಥ. ಬ್ರಹ್ಮನು ಇಂದ್ರಿಯಗಳ ಮೂಲಕ ಗ್ರಹಿಸಲ್ಪಡುವವನಲ್ಲ; ಜ್ಞಾನದ ಮೂಲಕ ಮಾತ್ರ ಅವನನ್ನು ತಿಳಿಯಲು ಸಾಧ್ಯ.

3) ಪ್ರಿಯಂ (ಆನಂದ): 'ಪ್ರಿಯಂ' ಎಂದರೆ ಆನಂದದ ಸ್ವರೂಪ. ಆನಂದ ಎಂಬ ಪದವು ಬ್ರಹ್ಮನಿಗೆ ಅನ್ವಯಿಸುತ್ತದೆ. ಉಪನಿಷತ್ತುಗಳು ಬ್ರಹ್ಮನನ್ನು 'ಆನಂದಮಯ' ಎಂದು ವರ್ಣಿಸುತ್ತವೆ. ಅಂದರೆ ಆತ್ಮ ಅಥವಾ ಬ್ರಹ್ಮ ಎಂಬ ವಿಷಯದ ಮುಖ್ಯ

ಗುಣವು ಆನಂದವೆಂದು ತಿಳಿಯುತ್ತದೆ. ಈ ಆನಂದದ ತತ್ವವನ್ನೇ 'ಪ್ರಿಯಂ' ಎಂಬ ಪದವು ಸೂಚಿಸುತ್ತದೆ. ಇವುಗಳಲ್ಲದೆ ಭಗವಂತನಿಗೆ ಇನ್ನೂ ಎರಡು ಲಕ್ಷಣಗಳಿವೆ. ಅವುಗಳೆಂದರೆ: ವ್ಯಕ್ತವಾದ ಭಗವಂತನಿಗೆ 'ರೂಪ' ಮತ್ತು 'ನಾಮ' (ಹೆಸರು) ಎಂಬ ಎರಡು ಲಕ್ಷಣಗಳಿರುತ್ತವೆ.

■ **ರೂಪ:** ಎಂದರೆ ಒಂದು ಆಕಾರವಿರುವುದು. ಈ ಸೃಷ್ಟಿಯಲ್ಲಿ 84 ಲಕ್ಷ ಜೀವರಾಶಿಗಳಿಗೆ ವಿವಿಧ ಬಗೆಯ ಆಕಾರಗಳಿವೆ. ಪ್ರತಿಯೊಂದು ಜೀವರಾಶಿಗೂ ಹೊರಗಿನಿಂದ ಆಕಾರವಿದ್ದರೆ, ಒಳಗಡೆ 'ಆತ್ಮ'ವಿರುತ್ತದೆ. ನಾವು ಗಮನಿಸಿದರೆ, ಆಕಾರವೇ ವ್ಯಕ್ತವಾದ ಭಗವಂತ. ಮಾನವ ಜನ್ಮ ಬರುವವರೆಗೆ ವಿವಿಧ ಜನ್ಮಗಳಲ್ಲಿ ಅಂದರೆ ಪಕ್ಷಿ ಜಾತಿ, ವೃಕ್ಷ ಜಾತಿ, ಪಶು ಜಾತಿ, ಕ್ರಿಮಿ ಕೀಟಗಳ ಜಾತಿ – ಹೀಗೆ ಪ್ರತಿಯೊಂದು ಜಾತಿಗೆ ಒಂದೊಂದು ರೂಪ ಮತ್ತು ನಾಮವಿರುತ್ತದೆ. ಹಾಗೆಯೇ ಮಾನವ ಜನ್ಮಕ್ಕೆ ಬರುವಷ್ಟರಲ್ಲಿ ಪ್ರತಿಯೊಬ್ಬರಿಗೂ ಒಂದು ಹೆಸರು (ನಾಮ) ಮತ್ತು ಒಂದು ರೂಪವಿರುತ್ತದೆ.

ಈ ಮಾರ್ಗಕ್ಕೆ ಬಂದ ನೀವು, ಗುರುಗಳ ಮೂಲಕ ತಿಳಿದುಕೊಳ್ಳುವ ಜ್ಞಾನ ಮತ್ತು ಸ್ವಯಂ ಅಧ್ಯಯನದ ಮೂಲಕ ಪಡೆಯುವ ಜ್ಞಾನದಿಂದ ನೀವೇ ಆತ್ಮಗಳು, 'ಆತ್ಮವೇ ಭಗವಂತ' ಎಂದು ತಿಳಿದುಕೊಳ್ಳುತ್ತೀರಿ. ಆತ್ಮದ ಲಕ್ಷಣವು 'ಸಚ್ಚಿದಾನಂದ' ಸ್ವರೂಪವೆಂದೂ, ಹೊರಗೆ ಕಾಣುವಂತಹುದು ಕೇವಲ ರೂಪ ಮತ್ತು ನಾಮವೆಂದೂ ಅರಿತುಕೊಳ್ಳುತ್ತೀರಿ. ರೂಪ ಮತ್ತು ನಾಮ ಎಂಬುವು ಜನ್ಮ ತಳೆದ ನಂತರ ಬಂದವುಗಳು. ಆತ್ಮವು ಅವ್ಯಕ್ತವಾದುದು; ರೂಪ ಮತ್ತು ನಾಮವಿಲ್ಲದಿದ್ದರೆ ಮನುಷ್ಯನು ಮನುಷ್ಯನೇ ಅಲ್ಲ.

ಈ ಸೃಷ್ಟಿಯಲ್ಲಿ ಸಮಸ್ತ ಜೀವಿಗಳಿಗೆ ರೂಪವಿದೆ, ನಾಮವಿದೆ (ಹೆಸರು). ಇದು ವ್ಯಕ್ತ ರೂಪ. ಅವ್ಯಕ್ತ ರೂಪವೆಂದರೆ ಅಸ್ತಿ (ಇರುವುದು), ಭಾತಿ (ಪ್ರಕಾಶಿಸುವುದು), ಪ್ರಿಯಂ (ಆನಂದ). ಅಂದರೆ ಅದುವೇ ಆತ್ಮ. ಅದು ಚೈತನ್ಯವನ್ನು ಹೊಂದಿರುತ್ತದೆ, ಪ್ರಕಾಶವನ್ನು ನೀಡುತ್ತದೆ ಮತ್ತು ಅದುವೇ ಆನಂದದ ಸ್ವರೂಪವಾಗಿದೆ. ಇವು ಐದನ್ನು ನಾವು ಕ್ರಮವಾಗಿ ನೋಡಿದಾಗ ಅವ್ಯಕ್ತದಲ್ಲಿ ರೂಪ ಮತ್ತು ನಾಮಗಳು ಇರುವುದಿಲ್ಲ. ಆತ್ಮವನ್ನೇ ನಾವು 'ಸಚ್ಚಿದಾನಂದ ಸ್ವರೂಪ' ಎನ್ನುತ್ತೇವೆ. ನಾವು ಯಾರು ಎಂಬುದಕ್ಕೆ ವ್ಯಕ್ತವಾಗಿರುವುದು ಮತ್ತು ವ್ಯಕ್ತವಾಗದಿರುವುದು ಕೂಡ ಭಗವಂತನೇ ಎಂದು ನಮ್ಮ ಜ್ಞಾನದ ವ್ಯಾಪ್ತಿ ಹೆಚ್ಚಾದಂತೆಲ್ಲಾ ನಮಗೆ ತಿಳಿಯುತ್ತದೆ.

ಅಜ್ಞಾನ ಮತ್ತು ಜ್ಞಾನದ ನಡುವಿನ ವ್ಯತ್ಯಾಸ

⏭ **ಅಜ್ಞಾನದ ಸ್ಥಿತಿ:** ಧ್ಯಾನ ಮಾರ್ಗಕ್ಕೆ ಬರುವ ಮೊದಲು ಅಜ್ಞಾನದಿಂದಾಗಿ 'ನಾನೇ ಈ ದೇಹ', 'ನನಗೆ ಕಾಣಿಸುವ ಈ ರೂಪವೇ ನಾನು' ಎಂದು ಭಾವಿಸುತ್ತೇವೆ. ಅಜ್ಞಾನದಲ್ಲಿರುವವನು ರೂಪ ಮತ್ತು ನಾಮಕ್ಕೆ ಹೆಚ್ಚು ಬೆಲೆ ನೀಡುತ್ತಾ, ಅವುಗಳಿಗಾಗಿಯೇ ಕಷ್ಟಪಡುತ್ತಾ ದ್ವೈತದಲ್ಲಿ ಬದುಕುತ್ತಾನೆ. ತಮೋಗುಣದಲ್ಲಿರುವ ಮನುಷ್ಯನು ಈ ಪ್ರಪಂಚದಲ್ಲಿ ಕಣ್ಣಿಗೆ ಕಾಣಿಸುವ ರೂಪ ಮತ್ತು ನಾಮಗಳೇ ನಿಜವೆಂದು, ಶಾಶ್ವತವೆಂದು ನಂಬುತ್ತಾನೆ.

⏭ **ಜ್ಞಾನದ ಸ್ಥಿತಿ:** ರೂಪ ಮತ್ತು ನಾಮಕ್ಕೆ ಬೆಲೆ ನೀಡುವವನು ದ್ವೈತದಲ್ಲಿ ಇರುತ್ತಾನೆ. ರೂಪ ಮತ್ತು ನಾಮಗಳು ಕಲ್ಪಿತವಾದವುಗಳೇ ಹೊರತು ಶಾಶ್ವತವಲ್ಲ. ಶಾಶ್ವತವಾದ, ಸತ್ಯವಾದ, ನಿತ್ಯವಾದ ಆತ್ಮನನ್ನು ತಿಳಿಯಬೇಕೆಂದರೆ ಬಾಹ್ಯ ದೃಷ್ಟಿಯನ್ನು ಬಿಟ್ಟು ಅಂತರ್ ದೃಷ್ಟಿಯನ್ನು ಹೊಂದಿದವನಿಗೆ ಮಾತ್ರ ಸಾಧ್ಯವಾಗುತ್ತದೆ. ಆಗಲೇ ಶಾಶ್ವತ ಆನಂದದ ಸ್ಥಿತಿ ಲಭಿಸುತ್ತದೆ.

⏭ **ಜೀವನದ ಪ್ರಶ್ನೆಗಳು:** ಈ ಶರೀರಕ್ಕೆ ಶಕ್ತಿಯನ್ನು ನೀಡುತ್ತಿರುವವರು ಯಾರು? ಈ ಶರೀರವನ್ನು ಕಾಪಾಡುತ್ತಿರುವವರು ಯಾರು? ಈ ಶರೀರ ಹೀಗೆ ನಿಲ್ಲಲು ಕಾರಣವೇನು? ಕೆಲವು ಶರೀರಗಳು ಪ್ರಾಣವಿಲ್ಲದ ಜೀವಿಗಳಾಗುತ್ತಿವೆ (ಮರಣ), ಕೆಲವು ಶರೀರಗಳು ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿವೆ. ಮರಣವೆಂದರೇನು? ಮರಣವೇಕೆ ಬರುತ್ತದೆ? ಭೂಮಿಯ ಮೇಲೆ ಏಕೆ ಶಾಶ್ವತವಾಗಿ ಇರಲು ಸಾಧ್ಯವಿಲ್ಲ? ಕೆಲವರು ದುಃಖದಲ್ಲಿದ್ದಾರೆ, ನೋವಿನಲ್ಲಿದ್ದಾರೆ – ಇಂತಹ ಸಂದೇಹಗಳು ಮತ್ತು ಅವುಗಳ ಬಗ್ಗೆ ತಿಳಿದುಕೊಳ್ಳಬೇಕೆಂಬ ಹಂಬಲ ಸಾತ್ವಿಕ ಗುಣಕ್ಕೆ ಬಂದವರಿಗೆ ಇದು ಪ್ರಾರಂಭವಾಗುತ್ತದೆ.

ಬುದ್ಧನಿಗೂ ಕೂಡ ಇಂತಹದ್ದೇ ತಪನೆ (ಹಂಬಲ) ಉಂಟಾಯಿತು. ಆತನು ಹೊರಗೆ ಹೋದಾಗ ಶವವನ್ನು, ದುಃಖದಲ್ಲಿರುವವರನ್ನು, ರೋಗಗ್ರಸ್ತ ವ್ಯಕ್ತಿಗಳನ್ನು ಮತ್ತು ಭಿಕ್ಷುಕನನ್ನು ನೋಡಿ "ಯಾಕೆ ಎಲ್ಲರೂ ಒಂದೇ ರೀತಿ ಇಲ್ಲ? ಎಲ್ಲರೂ ಯಾಕೆ ಸಂತೋಷವಾಗಿಲ್ಲ? ಯಾಕೆ ಮರಣ ಹೊಂದುತ್ತಿದ್ದಾರೆ?" ಎಂಬ ಸಂದೇಹ ಬಂದಾಗ ಅವರಲ್ಲಿ ತಪನೆ ಶುರುವಾಯಿತು. ಕಾರಣವನ್ನು ತಿಳಿದುಕೊಳ್ಳಲೆಂದು ಪತ್ನಿ, ಮಗ, ರಾಜ್ಯ ಮತ್ತು ಮನೆಯನ್ನು ತೊರೆದು ಏಳು ವರ್ಷಗಳ ಕಾಲ ಕಷ್ಟಪಟ್ಟು ಸಾಧನೆ ಮಾಡಿ ತಮ್ಮ ಎಲ್ಲಾ ಸಂದೇಹಗಳನ್ನು ನಿವಾರಿಸಿಕೊಂಡರು. "ಆನಾಪಾನಸತಿ" ಧ್ಯಾನವನ್ನು ತಿಳಿದುಕೊಂಡರು.

ನೀವು ಕಷ್ಟಪಡದೆಯೇ ನಿಮ್ಮ ಹಿಂದಿನ ತಲೆಮಾರಿನವರೆಲ್ಲರೂ

ಅನ್ವೇಷಣೆ ಮಾಡಿ, ಎಲ್ಲದಕ್ಕೂ ಕಾರಣ "ಬಾಹ್ಯ ದೃಷ್ಟಿ" ಎಂಬ ಸತ್ಯವನ್ನು ನಮಗೆ ತಿಳಿಸಿದ್ದಾರೆ. ಬಾಹ್ಯ ದೃಷ್ಟಿ ಇರುವ ಮಾನವನು ಕಣ್ಣಿಗೆ ಕಾಣುವುದೆಲ್ಲವೂ ಸತ್ಯ ಎಂದು ಅಂದುಕೊಳ್ಳುವುದು, "ನಾನು ಶಾಶ್ವತ" ಎಂದು ಭಾವಿಸುವುದು, "ಈ ಪ್ರಪಂಚ ಶಾಶ್ವತ" ಎಂದು ನಂಬುವುದು ಮತ್ತು ಏನು ಮಾಡಿದರೂ "ನಾನೇ ಮಾಡುತ್ತಿದ್ದೇನೆ" ಎಂಬ ಭಾವನೆಯಲ್ಲಿ ಇರುತ್ತಾರೆ. ಆ ಭಾವನೆಯೇ ಸಮಸ್ತ ದುಃಖಗಳಿಗೆ ಕಾರಣವಾಗಿದೆ.

ಈ ಭಾವನೆ ಯಾಕೆ ಬರುತ್ತದೆ ಎಂದರೆ ಬಾಹ್ಯ ದೃಷ್ಟಿಯಲ್ಲಿ ಇರುವವನು ರೂಪ ಮತ್ತು ನಾಮವನ್ನು ನೋಡಿ ಸತ್ಯವನ್ನು ತಿಳಿದುಕೊಳ್ಳದೆ, ಮನಸ್ಸಿನ ಪ್ರಭಾವದಿಂದ ರೂಪವನ್ನು ನೋಡಿ ಮೆರಿಯುತ್ತಾ (ಸಂತೋಷಪಡುತ್ತಾ), ಬಾಧೆಗಳು ಮತ್ತು ಕಷ್ಟಗಳು ಬಂದಾಗ ಆವೇದನೆ ಪಡುತ್ತಾ ಇರುತ್ತಾರೆ. ಕೊನೆಗೆ ಸಾತ್ವಿಕ ಗುಣಕ್ಕೆ ಬಂದ ಮೇಲೆ "ಇದಕ್ಕೆ ಕಾರಣವೇನು?" ಎಂಬ ಅನ್ವೇಷಣೆ ಪ್ರಾರಂಭವಾಗುತ್ತದೆ. ಯಾವಾಗ ನಿಮ್ಮಲ್ಲಿ ಆ ತಪನೆ ಅತಿಯಾಗುತ್ತದೆಯೋ, ಆ ತಪನೆಯನ್ನು ತೀರಿಸಲು ಗುರುಗಳು ಬರುತ್ತಾರೆ.

ಏಕೆಂದರೆ ನಿಮಗೆ ಈ ದುಃಖಕ್ಕೆ ಕಾರಣವನ್ನು ತಿಳಿದುಕೊಳ್ಳುವಷ್ಟು ಬಿಡುವಿಲ್ಲ. ಈಗಿನ ಕಲಿಯುಗದಲ್ಲಿ ಮಾನವನು ಏನೇ ಬಂದರೂ "ನನ್ನ ಕರ್ಮ" ಎಂದು ಅಂದುಕೊಳ್ಳುತ್ತಾ ಅನುಭವಿಸುತ್ತಿದ್ದಾನೆ. ಇಲ್ಲದಿದ್ದರೆ "ಭಗವಂತನಿಗೆ ನನ್ನ ಮೇಲೆ ದಯೆ ಇಲ್ಲ" ಎಂದು ಒಂದು ಮಾತನ್ನು ಅಂದುಕೊಳ್ಳುತ್ತಾನೆ. ಆದರೆ, ಬಾಹ್ಯ ದೃಷ್ಟಿಯನ್ನು ಅಂತರ್ ದೃಷ್ಟಿಯನ್ನಾಗಿ ಬದಲಾಯಿಸಿದಾಗ ಮಾತ್ರ ಸತ್ಯವು ಗೋಚರಿಸುತ್ತದೆ. ಈ ದ್ವೈತ ಬುದ್ಧಿ ಹೋಗಿ ಅದ್ವೈತ ಬುದ್ಧಿ ಬಂದಾಗ ಜ್ಞಾನವು ಉದಯಿಸುತ್ತದೆ. ಅದಕ್ಕಾಗಿಯೇ ಗುರುಗಳು, **"ಬಾಹ್ಯವಾಗಿ ನೀನು ನೋಡುವುದೆಲ್ಲವೂ ಮಿಥ್ಯ; ಈ ಸೃಷ್ಟಿಯಲ್ಲಿ ಸೃಷ್ಟಿಸಲ್ಪಟ್ಟವುಗಳೆಲ್ಲವೂ ನಾಶವಾಗುವಂತವುಗಳು, ರೂಪ ಮತ್ತು ನಾಮಗಳು ಶಾಶ್ವತವಲ್ಲ"** ಎಂದು ಹೇಳುತ್ತಾರೆ.

ಅಸ್ತಿ, ಭಾತಿ, ಪ್ರಿಯಂ ಎಂದರೆ ಸಚ್ಚಿದಾನಂದ. ಈ ಮೂರು ಶಾಶ್ವತವಾದ ಆತ್ಮದ ಲಕ್ಷಣಗಳು. ಆದರೆ ವ್ಯಕ್ತವಾದ ಭಗವಂತನಿಗೆ ನಾಮ-ರೂಪಗಳಿರುತ್ತವೆ, ಇವು ನಾಶವಾಗುವಂತವುಗಳು. ಅವ್ಯಕ್ತವಾದ ಆತ್ಮಕ್ಕೆ ಅಸ್ತಿ, ಭಾತಿ, ಪ್ರಿಯಂ ಎಂಬ ಈ ಮೂರು ಲಕ್ಷಣಗಳೇ ಶಾಶ್ವತವೆಂದು, ಸತ್ಯವೆಂದರೇನು ಎಂದು ತಿಳಿದ ದಿನ ನಿಮಗೆ ಅರ್ಥವಾಗುತ್ತದೆ. ನೀವು ಅಂತರ್ಮುಖಿಯಾದ ದಿನ, ಸತ್ಯವು ಬೋಧನೆಯಾದ ದಿನ, ದುಃಖವಿಲ್ಲದ ಸ್ಥಿತಿಯನ್ನು ತಲುಪುತ್ತೀರಿ. ನೀವು ಆತ್ಮಾನುಭೂತಿಯನ್ನು ಪಡೆಯಬೇಕೆಂದರೆ ವ್ಯಕ್ತದಲ್ಲಿ (ಪ್ರಪಂಚದಲ್ಲಿ) ಜೀವಿಸುತ್ತಾ

ಅವ್ಯಕ್ತದ ಬಗ್ಗೆ ಆಲೋಚಿಸಬೇಕು. ಅಂದರೆ ಈ ಪ್ರಪಂಚದಲ್ಲಿ ಜೀವಿಸುತ್ತಾ, ನಿಮ್ಮ ಶರೀರವನ್ನು ಸಾಧನೆಗಾಗಿ ಉಪಯೋಗಿಸುತ್ತಾ ಆತ್ಮಜ್ಞಾನವನ್ನು ಪಡೆದು ಆ ಭಗವಂತನನ್ನು ತಿಳಿದುಕೊಳ್ಳಬೇಕು.

ಸಚ್ಚಿದಾನಂದ ಸ್ವರೂಪ ಎಂದರೆ ಅಸ್ತಿ, ಭಾತಿ, ಪ್ರಿಯಂ ಎಂಬ ಲಕ್ಷಣಗಳನ್ನು ಹೊಂದಿರುವ ಶಾಶ್ವತವಾದದ್ದು. ರೂಪ ಮತ್ತು ನಾಮಗಳು ಶಾಶ್ವತ ಎಂದುಕೊಂಡರೆ ಅದು ಅಜ್ಞಾನವೇ. ಅದಕ್ಕಾಗಿಯೇ ದ್ವೈತದಲ್ಲಿದ್ದೂ ಅದ್ವೈತವನ್ನು ತಿಳಿದುಕೊಳ್ಳಬೇಕು. ಆತ್ಮವು ನಿಮ್ಮ ಶರೀರವನ್ನು ಸಾಧನೆಗಾಗಿ ಆರಿಸಿ ತಂದುಕೊಂಡಿದೆ. ಅದನ್ನು ಮರೆತು ನೀವು ಶರೀರವನ್ನು ಕೇವಲ ಸುಖ–ಭೋಗಗಳಿಗಾಗಿ ಬಳಸಿದರೆ ದುಃಖದಲ್ಲೇ ಇರುತ್ತೀರಿ. ಅದೇ ಶರೀರವನ್ನು ಯೋಗದಲ್ಲಿ ತೊಡಗಿಸಿದರೆ ಆನಂದವಾಗಿ ಜೀವಿಸುತ್ತೀರಿ. ಸಾಧನೆಯನ್ನು ಮರೆತವನಿಗೆ ವೇದನೆಯೇ ಗತಿ. ಅದಕ್ಕಾಗಿಯೇ ಶರೀರಕ್ಕೆ ಏನು ಬೇಕೋ ಅದನ್ನು ನೀಡುತ್ತಾ (ಸ್ಥೂಲ ದೇಹಕ್ಕೆ ಅನ್ನ, ಪ್ರಾಣಮಯ ಕೋಶಕ್ಕೆ ಗಾಳಿ ಹೀಗೆ ಒಂದೊಂದಾಗಿ ಪ್ರತಿಯೊಂದು ಕೋಶಕ್ಕೂ ಒಂದೊಂದು ಅವಶ್ಯಕತೆ ಇರುತ್ತದೆ, ಆದ್ದರಿಂದ ಆ ಅವಶ್ಯಕತೆಗಳನ್ನು ಪೂರೈಸುತ್ತಾ ನಿಮ್ಮ ಶರೀರವನ್ನು ಸಾಧನೆಗಾಗಿ ಉಪಯೋಗಿಸಿಕೊಳ್ಳಬೇಕು.

ಈ ಶರೀರವು ಸಾಧನೆಗಾಗಿಯೇ ಹೊರತು ಕೇವಲ ಭೋಗಕ್ಕಲ್ಲ. "ನಾನು ಯಾರು?" ಎಂದು ತಿಳಿದುಕೊಳ್ಳುವುದಕ್ಕಾಗಿಯೇ ಈ ಶರೀರವನ್ನು ಪಡೆದಿದ್ದೇನೆ ಎಂದು ತಿಳಿದಾಗ, ನಾಮರೂಪಗಳೆಲ್ಲವೂ ಅಶಾಶ್ವತವೆಂದೂ, ನಾಮರೂಪವಿಲ್ಲದ ಸಚ್ಚಿದಾನಂದ ಸ್ವರೂಪಿಯಾದ ಆತ್ಮನು ನನ್ನ ಶರೀರದಲ್ಲೇ ಇದ್ದಾನೆಂದೂ ನಿಮಗೆ ಅರಿವಾಗುತ್ತದೆ. ಅದಕ್ಕಾಗಿಯೇ ಬಾಹ್ಯವಾಗಿ ಜ್ಞಾನವನ್ನು ಸಂಪಾದಿಸಬೇಕು. ಅದಕ್ಕೇ ಗುರುಗಳು "ಬುದ್ಧಿಯನ್ನು ಬೆಳೆಸಿಕೊ" ಎಂದು ಹೇಳುತ್ತಿರುತ್ತಾರೆ. ಅವರ ಮೂಲಕ ತಿಳಿದುಕೊಂಡ ಜ್ಞಾನವು ಬುದ್ಧಿಯಲ್ಲಿ ಲೀನವಾಗಬೇಕು. ನಿಮ್ಮ ಬಾಹ್ಯ ದೃಷ್ಟಿಯನ್ನು ಅಂತರ್ದೃಷ್ಟಿಯಾಗಿ ಬದಲಾಯಿಸಿಕೊಳ್ಳಬೇಕು, ಆಗ ಮಾತ್ರ ನೀವು ಆತ್ಮನನ್ನು ದರ್ಶಿಸಲು ಸಾಧ್ಯ.

ನೀವು ಅಂತರಂಗದೊಳಗೆ ಹೋದಂತೆಲ್ಲಾ ನಾಮರೂಪಗಳೆಲ್ಲವೂ ಮಿಥ್ಯೆ (ಸುಳ್ಳು), ಅಂತರಂಗದಲ್ಲಿರುವ ಆತ್ಮನೇ ಸತ್ಯ ಎಂಬುದು ತಿಳಿಯುತ್ತದೆ. ಅದಕ್ಕಾಗಿಯೇ ನೋಡಿ, ಧ್ಯಾನಕ್ಕೆ ಬಂದ ಆರಂಭದಲ್ಲಿ ಲೌಕಿಕ ವ್ಯವಹಾರಗಳನ್ನು ನೋಡಿಕೊಳ್ಳುತ್ತಲೇ ಸ್ವಲ್ಪ ಸಮಯ ಧ್ಯಾನ ಮಾಡುತ್ತಾರೆ. ಆತ್ಮಾನುಭೂತಿ ಪಡೆಯುತ್ತಾ ಹೋದಂತೆ ಧ್ಯಾನದ ಸಮಯವನ್ನು ಹೆಚ್ಚಿಸುತ್ತಾ, ಅಂತರ್ದೃಷ್ಟಿಯನ್ನು

ಬೆಳೆಸಿಕೊಳ್ಳಲು ಮತ್ತು ಆತ್ಮನನ್ನು ದರ್ಶಿಸಲು ಪ್ರಯತ್ನಿಸುತ್ತಾರೆ. ಅದಕ್ಕಾಗಿಯೇ ಜ್ಞಾನವನ್ನು ಬೆಳೆಸಿಕೊಳ್ಳುವುದರ ಮೇಲೆ ದೃಷ್ಟಿಯಿರಬೇಕು. 'ಆತ್ಮ ದೃಷ್ಟಿ' ಎಂದರೆ ಈ ವ್ಯಕ್ತ ರೂಪಗಳೆಲ್ಲದಕ್ಕೂ ಕಾರಣ ಆತ್ಮನೇ ಎಂದು ತಿಳಿಯುವುದು. ವ್ಯಕ್ತ ಮತ್ತು ಅವ್ಯಕ್ತ ಎರಡಕ್ಕೂ ಕಾರಣ ಭಗವಂತನೇ ಎಂಬ 'ಸರ್ವಾತ್ಮ ಭಾವನೆ'ಯನ್ನು ಬೆಳೆಸಿಕೊಳ್ಳಬೇಕು. ಸರ್ವಾತ್ಮ ಭಾವನೆ ಎಂದರೆ ನಾನು ನೋಡಬಲ್ಲ ಮತ್ತು ನೋಡಲಾಗದ ಎಲ್ಲವೂ ಭಗವಂತನ ಸೃಷ್ಟಿಯೇ ಎಂಬ ಭಾವನೆ. ಈಗ ನೀವು ನೋಡುತ್ತಿರುವ ಪ್ರಪಂಚವು ತುಂಬಾ ಚಿಕ್ಕದು. ಸೃಷ್ಟಿ ಎಂದರೆ ಕಣ್ಣಿಗೆ ಕಾಣಿಸುವುದು ಮಾತ್ರವಲ್ಲ, ಕಣ್ಣಿಗೆ ಕಾಣಿಸದ ಎಷ್ಟೋ ಲೋಕಗಳಿವೆ. ಅದಕ್ಕಾಗಿಯೇ ಆ ನಾರಾಯಣನ ಶಕ್ತಿಯು ಕಾಣಿಸುವಂತಹುದರಲ್ಲಿ, ಕಾಣಿಸದಿರುವುದರಲ್ಲಿ, ಒಳಗೂ, ಹೊರಗೂ, ಎಲ್ಲೆಡೆಯೂ ಇರುತ್ತದೆ. ಜ್ಞಾನವನ್ನು ಹೆಚ್ಚಿಸಿಕೊಂಡು, ಆತ್ಮ ದೃಷ್ಟಿ ಬೆಳೆದಾಗ ಅಂದರೆ 'ಮೂರನೇ ಕಣ್ಣು' ತೆರೆದಾಗ, ಆ ಪರಮದಲ್ಲಿರುವ ಲೋಕಗಳನ್ನು ಕೂಡ ದರ್ಶಿಸಬಹುದು. ಅದಕ್ಕಾಗಿಯೇ ನೀವು ಧ್ಯಾನಕ್ಕೆ ಬರುವವರೆಗೆ ಬಾಹ್ಯ ದೃಷ್ಟಿ ಹೆಚ್ಚಾಗಿ ಇರುತ್ತದೆ. ಗುರುಗಳ ಮೂಲಕ ಬಾಹ್ಯ ದೃಷ್ಟಿಯನ್ನು ಕಡಿಮೆ ಮಾಡಿಕೊಂಡು ಅಂತರ್ದೃಷ್ಟಿಯನ್ನು ಹೆಚ್ಚಿಸಿಕೊಳ್ಳಬೇಕು. ಏಕೆಂದರೆ ನಮಗೆ ಕಾಣಿಸುವ ಈ ಲೋಕವು ಬಹಳ ಚಿಕ್ಕದು, ಕಾಣಿಸದ ವಿಶ್ವವು ಬಹಳ ದೊಡ್ಡದಿದೆ. ಆದ್ದರಿಂದ ನೀವು ಬಹಳಷ್ಟನ್ನು ತಿಳಿದುಕೊಳ್ಳಬೇಕೆಂದರೆ, ಬಾಹ್ಯವಾಗಿ ಕಾಣಿಸುವವುಗಳನ್ನೇ ನೋಡುತ್ತಾ ದ್ವಂದ್ವದಲ್ಲೇ ಉಳಿಯಬಾರದು.

ಅದ್ವೈತ ಎಂದರೆ, ಒಂದು ವಸ್ತ್ರವನ್ನು ಉದಾಹರಣೆಗೆ ತೆಗೆದುಕೊಂಡರೆ: ದ್ವೈತದಲ್ಲಿ ಇರುವವರು ದಾರ ಬೇರೆ, ವಸ್ತ್ರ ಬೇರೆ ಎಂದು ಅಂದುಕೊಳ್ಳುತ್ತಾರೆ. ಆದರೆ ಅದ್ವೈತದಲ್ಲಿ ಇರುವವನು ದಾರ ಬೇರೆ, ವಸ್ತ್ರ ಬೇರೆ ಅಲ್ಲ, ಎಲ್ಲವೂ ವಸ್ತ್ರವೇ ಎನ್ನುತ್ತಾನೆ. ಏಕೆಂದರೆ ಆ ವಸ್ತ್ರದಲ್ಲಿ ಇರುವುದೆಲ್ಲವೂ ನೂಲಿನ ಎಳೆಗಳೇ ಆಗಿವೆ. ದ್ವೈತದಲ್ಲಿ ಇರುವವನು ಭಗವಂತ ಬೇರೆ, ಸೃಷ್ಟಿ ಬೇರೆ ಎನ್ನುತ್ತಾನೆ. ಆದರೆ ಅದ್ವೈತದಲ್ಲಿ ಇರುವವನು ಕಾಣಿಸುತ್ತಿರುವುದು ಮತ್ತು ಕಾಣಿಸದಿರುವುದು ಎಲ್ಲದರಲ್ಲೂ ಇರುವುದು ಆತ್ಮ ಚೈತನ್ಯವೇ, ಇದಕ್ಕಿಂತ ಬೇರೆ ಏನೂ ಇಲ್ಲ ಎಂದು ತಿಳಿದುಕೊಳ್ಳುತ್ತಾನೆ. **'ಅಹಂ ಬ್ರಹ್ಮಾಸ್ಮಿ', 'ತತ್ವಮಸಿ', 'ಸರ್ವಂ ಖಲ್ವಿದಂ ಬ್ರಹ್ಮ' –** ಅಂದರೆ ಸೃಷ್ಟಿಯೆಲ್ಲವೂ ಬ್ರಹ್ಮಮಯವೇ ಎಂದು ಅವನು ಅರಿಯುತ್ತಾನೆ. ವ್ಯಕ್ತವಾದ ರೂಪಗಳ ಹಿಂದೆ ಅವ್ಯಕ್ತವಾದ ಆತ್ಮವಿದೆ. ಈ ವ್ಯಕ್ತವಾದದ್ದು ನಶಿಸುತ್ತದೆ, ಆದರೆ ಅವ್ಯಕ್ತವಾದದ್ದು ಎಂದಿಗೂ ನಶಿಸುವುದಿಲ್ಲ ಎಂಬುದು ಅದ್ವೈತಿಯಾದವನಿಗೆ ತಿಳಿಯುತ್ತದೆ.

"ಜಗತ್ತು ಮಿಥ್ಯೆ, ಆತ್ಮ ಸತ್ಯ" ಹೇಗಾಯಿತು?

ಶಂಕರಾಚಾರ್ಯರು "ಜಗತ್ ಮಿಥ್ಯೆ, ಆತ್ಮ ಸತ್ಯ" ಎಂದು ಬೋಧಿಸಿದ್ದಾರೆ. ಆದರೆ ನಮ್ಮ ಕಣ್ಣಿಗೆ ಕಾಣಿಸುವ ಈ "ಜಗತ್ತು ಮಿಥ್ಯೆ" ಆಗುವುದು ಹೇಗೆ? ಕಾಣಿಸದ "ಆತ್ಮ" ಸತ್ಯ ಆಗುವುದು ಹೇಗೆ? ಎಂಬ ಅನೇಕ ಸಂದೇಹಗಳು ನಿಮಗೆ ಬರಬಹುದು. ಒಬ್ಬ ಜ್ಞಾನಿಯು ತನಗೆ ಬರುವ ಪ್ರತಿ ಸಂದೇಹವನ್ನು ಪರಿಹರಿಸಿಕೊಳ್ಳುತ್ತಾ ಸಾಧನೆಯಲ್ಲಿ ಮುಂದುವರಿಯಬೇಕು. ಅದಕ್ಕಾಗಿಯೇ "ಜಗತ್ತು ಮಿಥ್ಯೆ, ಆತ್ಮ ಸತ್ಯ" ಎನ್ನುವುದು ಹೇಗೆ ಎಂದು ನಾವು ವಿವರಿಸೋಣ.

ಶಂಕರಾಚಾರ್ಯರು ಬಹಳ ದೊಡ್ಡ ಜ್ಞಾನಿಗಳು, ಅವರು ಹೇಳಿದ್ದಾರೆ ಎಂದರೆ ಅದು ಸತ್ಯವೇ ಆಗಿರುತ್ತದೆ. ಆದರೆ ನಮ್ಮಲ್ಲಿ ಪ್ರತಿಯೊಬ್ಬರಿಗೂ – "ನಮ್ಮ ಕಣ್ಣಿಗೆ ಕಾಣುವ ಈ ಸೃಷ್ಟಿ ಇಲ್ಲ ಎನ್ನುತ್ತಾರಲ್ಲ, ಕಣ್ಣಿಗೆ ಕಾಣದ ಆತ್ಮ ಸತ್ಯ ಎನ್ನುತ್ತಾರಲ್ಲ, ಅದು ಹೇಗೆ?" ಎಂಬ ಸಂದೇಹ ಕಾಡುತ್ತದೆ. ನನಗೂ ಕೂಡ ಬಹಳ ದಿನಗಳಿಂದ ಈ ಸಂದೇಹವಿತ್ತು. ನಮ್ಮ ಸಂದೇಹಗಳನ್ನೆಲ್ಲಾ ಗುರುಗಳ ಮೂಲಕ, ಪುಸ್ತಕಗಳ ಮೂಲಕ ಪರಿಹರಿಸಿಕೊಳ್ಳುತ್ತಾ ಈ ಮಾರ್ಗದಲ್ಲಿ ಪ್ರಗತಿ ಸಾಧಿಸಬೇಕು. ಯಾವುದೇ ವಿಷಯದಲ್ಲಿ ನಿಮಗೆ ಪೂರ್ಣ ಸ್ಪಷ್ಟತೆ ಸಿಕ್ಕಾಗ ಮಾತ್ರ ನೀವು ಅದನ್ನು ಇತರರಿಗೆ ಅರ್ಥವಾಗುವಂತೆ ಬೋಧಿಸಲು ಸಾಧ್ಯ. ಸರಿಯಾದ ತಿಳುವಳಿಕೆ ಇಲ್ಲದಿದ್ದಾಗ ನೀವು ಬೋಧಿಸಲು ಸಾಧ್ಯವಿಲ್ಲ. ಪತ್ರಿಜಿಯವರು ಕೂಡ ಅನೇಕ ಸಂದೇಹಗಳಿಗೆ ಎಲ್ಲರಿಗೂ ಅರ್ಥವಾಗುವಂತೆ ಉತ್ತಮ ವಿವರಣೆ ನೀಡುತ್ತಿದ್ದರು.

ಈ ಜಗತ್ತೆಲ್ಲಾ ಸತ್ಯವೋ ಅಥವಾ ಅಸತ್ಯವೋ ಎಂಬ ಗೊಂದಲದಲ್ಲಿ ಎಲ್ಲರೂ ಇರುತ್ತಾರೆ. ಆದರೆ ಇದು ಸತ್ಯವೂ ಅಲ್ಲ, ಅಸತ್ಯವೂ ಅಲ್ಲ, ಇದೊಂದು "ಮಿಥ್ಯೆ" ಎಂದು ಶಂಕರಾಚಾರ್ಯರು ಹೇಳಿದ್ದಾರೆ. ಈ ಜಗತ್ತು ಸೃಷ್ಟಿಸಲ್ಪಟ್ಟಂತೆ ಕಾಣುತ್ತಿರುತ್ತದೆ, ಆದರೆ ಇದು ಸತ್ಯವಲ್ಲ ಎಂದು ಅವರು ಒಂದು ಮಾತನ್ನು ಹೇಳಿದರು. ಮಿಥ್ಯೆ ಎಂದರೆ ಯಾವಾಗಲೂ ಕಾಣಿಸುವುದಲ್ಲ, ಕಾಣಿಸದೇ ಇರುವುದೂ ಅಲ್ಲ; ಕಾಣಿಸುತ್ತಾ ಕಾಣಿಸದೇ ಇರುವುದೇ ಮಿಥ್ಯೆ.

ಮಿಥ್ಯೆ ಎಂದರೆ ನಾವು ನೋಡುತ್ತಿರುವಾಗ ಮಾತ್ರ ಕಾಣಿಸಿ, ನಾವು ನೋಡದಿದ್ದಾಗ ಕಾಣಿಸದೇ ಇರುವುದು ಹೇಗೆಂದರೆ, ನಮ್ಮ ಮನಸ್ಸು ಇದ್ದಾಗ ಈ ಪ್ರಪಂಚವೆಲ್ಲಾ ಕಾಣಿಸುತ್ತದೆ; ಅಂದರೆ "ಜಾಗ್ರದವಸ್ಥೆ"ಯಲ್ಲಿ (ಎಚ್ಚರದ ಸ್ಥಿತಿ) ನಾವು ನೋಡುತ್ತಿರುವಾಗ ಪ್ರಪಂಚವು ಕಾಣಿಸುತ್ತದೆ.

ಹಾಗೆಯೇ "ಸ್ವಪ್ನಾವಸ್ಥೆ"ಯಲ್ಲಿ (ಕನಸಿನ ಸ್ಥಿತಿ) ನಾವು ನಿದ್ರಿಸುತ್ತಿರುವಾಗ ಕನಸುಗಳು ಬರುತ್ತಿರುತ್ತವೆ. ಅಂತಹ ಸಮಯದಲ್ಲಿಯೂ ನಾವು ಮನಸ್ಸಿನ ಮೂಲಕ

ಈ (ಕನಸಿನ) ಪ್ರಪಂಚವನ್ನು ನೋಡಬಹುದು. ಆದರೆ "ಸುಷುಪ್ತಿ"ಯಲ್ಲಿ (ಗಾಢ ನಿದ್ರೆಯ ಸ್ಥಿತಿ) ಮನಸ್ಸು ಕೆಲಸ ಮಾಡದಿದ್ದಾಗ ಅಂದರೆ ಯಾವುದೇ ಸಂಕಲ್ಪ, ಆತಂಕ, ಕೋರಿಕೆ ಅಥವಾ ಸಿಟ್ಟು ಇಲ್ಲದಿದ್ದಾಗ ಆ ಸ್ಥಿತಿಯಲ್ಲಿ ಮನಸ್ಸು ಕೆಲಸ ಮಾಡುವುದಿಲ್ಲ, ಆದ್ದರಿಂದ ಅಲ್ಲಿ ಪ್ರಪಂಚವೇ ಇಲ್ಲ.

ಮನಸ್ಸು ಮತ್ತು ಪ್ರಪಂಚದ ಸಂಬಂಧ ಈ ಮೂರು ಅವಸ್ಥೆಗಳನ್ನು ಗಮನಿಸಿದರೆ:

⏭ **ಜಾಗ್ರದವಸ್ಥೆ: ಮನಸ್ಸು ಕೆಲಸ ಮಾಡುತ್ತದೆ.**

⏭ **ಸ್ವಪ್ನಾವಸ್ಥೆ: ಮನಸ್ಸು ಕೆಲಸ ಮಾಡುತ್ತದೆ.**

ಈ ಎರಡು ಅವಸ್ಥೆಗಳಲ್ಲಿ ನೀವು ನಿಮ್ಮ ಸುತ್ತಲಿರುವ ಪ್ರಪಂಚದೊಂದಿಗೆ ಸಂಪರ್ಕದಲ್ಲಿರುತ್ತೀರಿ. ಆದರೆ ಸುಷುಪ್ತಿಯಲ್ಲಿ ಮನಸ್ಸು ಕೆಲಸ ಮಾಡದ ಕಾರಣ, ಪ್ರಪಂಚದೊಂದಿಗೆ ಯಾವುದೇ ಸಂಪರ್ಕವಿರುವುದಿಲ್ಲ. ಕನಸಿನಲ್ಲಿಯೂ ನೀವು ಊಹಿಸಿಕೊಂಡ ಪ್ರಪಂಚವಿರುತ್ತದೆ. ಅಂದರೆ ಹೊರಜಗತ್ತಿನ ನಿಮ್ಮ ಆಲೋಚನೆಗಳೆಲ್ಲವೂ ಕನಸಿನ ರೂಪದಲ್ಲಿ ಸ್ವಪ್ನಾವಸ್ಥೆಯಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ಗಾಢ ನಿದ್ರೆಯಲ್ಲಿ ನಿಮ್ಮ ಮನಸ್ಸು ನಿಶ್ಚಿಂತವಾಗಿರುತ್ತದೆ. ಯಾವುದೇ ಚಿಂತೆ ಅಥವಾ ಕೋರಿಕೆಗಳು ಇಲ್ಲದಿದ್ದಾಗ ನಿದ್ರೆ ಚೆನ್ನಾಗಿ ಬರುತ್ತದೆ. ಅಂತಹ ಸುಷುಪ್ತಿಯ ಸ್ಥಿತಿಯಲ್ಲಿ ಪ್ರಪಂಚವೇ ಇರುವುದಿಲ್ಲ.

■ ಶಂಕರಾಚಾರ್ಯರ ಸಿದ್ಧಾಂತ

ನೀವು ಗಮನಿಸಿದರೆ, ಗಾಢವಾಗಿ ನಿದ್ರೆ ಮಾಡಿದ ದಿನ ಬೆಳಿಗ್ಗೆ ಎದ್ದ ನಂತರ, "ಇಂದು ಚೆನ್ನಾಗಿ ನಿದ್ರೆ ಹತ್ತಿತು, ನನಗೆ ನಿದ್ರೆಯಲ್ಲಿ ಏನೂ ತಿಳಿಯಲಿಲ್ಲ" ಎಂದು ಹೇಳುತ್ತೀರಿ. ಇದರರ್ಥ ಜಾಗ್ರದವಸ್ಥೆಯಲ್ಲಿ "ಜಾಗ್ರತ್ ಪ್ರಪಂಚ" ಇದೆ, ಸ್ವಪ್ನಾವಸ್ಥೆಯಲ್ಲಿ "ಸ್ವಪ್ನ ಪ್ರಪಂಚ" ಇದೆ, ಆದರೆ ಮನಸ್ಸು ಕೆಲಸ ಮಾಡದ ಸುಷುಪ್ತಿಯಲ್ಲಿ ಯಾವುದೇ ಪ್ರಪಂಚವಿಲ್ಲ. ಇದೇ ವಿಷಯವನ್ನು ಶಂಕರಾಚಾರ್ಯರು ಹೇಳುತ್ತಿದ್ದಾರೆ: **"ಯಾವುದು ಒಂದು ಸಮಯದಲ್ಲಿ ಇದ್ದು, ಇನ್ನೊಂದು ಸಮಯದಲ್ಲಿ ಇರುವುದಿಲ್ಲವೋ ಅದು ಮಿಥ್ಯೆ"**. ಆದರೆ ಈ ಮೂರೂ ಅವಸ್ಥೆಗಳಲ್ಲಿ ನಿಮ್ಮ ಆತ್ಮವು ಕೆಲಸ ಮಾಡುತ್ತಲೇ ಇರುತ್ತದೆ. ಹಾಗಾಗಿಯೇ **"ಆತ್ಮ ಸತ್ಯಂ ಜಗತ್ ಮಿಥ್ಯಾ"** ಎಂದು ಹೇಳಲಾಗಿದೆ.

ಶಂಕರಾಚಾರ್ಯರು ನಮಗೆ ಇದನ್ನು ಇನ್ನೂ ಚೆನ್ನಾಗಿ ಅರ್ಥ ಮಾಡಿಸಲು ಒಂದು ಸುಂದರವಾದ ಉದಾಹರಣೆಯನ್ನು ನೀಡಿದ್ದಾರೆ. ನೀವು ಕನ್ನಡಿಯಲ್ಲಿ ನೋಡಿಕೊಂಡಾಗ ನಿಮ್ಮ ಪ್ರತಿಬಿಂಬ ನಿಮಗೆ ಕಾಣಿಸುತ್ತದೆ. ಆದರೆ ಆ ಪ್ರತಿಬಿಂಬದಲ್ಲಿ ಕಾಣುವುದು ನಿಜವಾದ ನೀವಲ್ಲ ತಾನೇ? ನಿಮ್ಮ ರೂಪ ಕಾಣಿಸುತ್ತದೆಯೇ ಹೊರತು ನೀವು ಅಲ್ಲಿ ಇರುವುದಿಲ್ಲ. ಅಂದರೆ ಇಲ್ಲಿ ನೀವು ಗಮನಿಸಿದರೆ, ಬಿಂಬವು ನೀವು, ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬವಲ್ಲ. ಬಿಂಬವು ಸತ್ಯ, ಪ್ರತಿಬಿಂಬವು ಅಸತ್ಯ ಎಂದು ನೀವು ಅರ್ಥಮಾಡಿಕೊಳ್ಳಬಹುದು.

ಪ್ರತಿಬಿಂಬದಲ್ಲಿ ಕೂಡ ಅಚ್ಚು ನಿಮ್ಮಂತೆಯೇ ಇರುತ್ತೀರಿ. ಆದರೆ ಅದು ಏಕೆ ಅಸತ್ಯವಾಗುತ್ತದೆ? ನೀವು ಗಮನಿಸಿದರೆ ಪ್ರತಿಬಿಂಬದಲ್ಲಿ ಕೆಲವು ಬದಲಾವಣೆಗಳಿರುತ್ತವೆ. ಕನ್ನಡಿಯಲ್ಲಿ ನಿಮ್ಮ ಬಲಗೈ ಎಡಗೈಯಾಗಿ, ಎಡಗೈ ಬಲಗೈಯಾಗಿ ಕಾಣಿಸುತ್ತದೆ. ಅಂದರೆ ಬಲಗಡೆ ಇರುವ ವಸ್ತುಗಳು ಎಡಗಡೆ, ಎಡಗಡೆ ಇರುವ ವಸ್ತುಗಳು ಬಲಗಡೆಯಾಗಿ ಕಾಣಿಸುತ್ತವೆ. ಅಂದರೆ ಬಲವು ಎಡವಾಗುತ್ತದೆ, ಎಡವು ಬಲವಾಗುತ್ತದೆ.

ಹಾಗೆಯೇ ನಿಮ್ಮ ಮನಸ್ಸಿನ ಕಲ್ಪನೆಯಿಂದ ಉಂಟಾದ ಈ ಜಗತ್ತು ಮಿಥ್ಯೆಯೇ ಹೊರತು ಸತ್ಯವಲ್ಲ. ಈ ಪ್ರಪಂಚವು ನಿಮ್ಮ ಮನಸ್ಸಿನಿಂದಲೇ ಬಂದಿದೆ. ಮನಸ್ಸು ಕೂಡ ಆತ್ಮನಿಂದಲೇ ಹುಟ್ಟಿದೆ, ಮನಸ್ಸಿಗೆ ಶಕ್ತಿಯು ಆತ್ಮನಿಂದಲೇ ಬಂದಿದೆ. ಬಿಂಬಕ್ಕೂ ಪ್ರತಿಬಿಂಬಕ್ಕೂ ಎಷ್ಟು ವ್ಯತ್ಯಾಸವಿದೆಯೋ, ಆತ್ಮನಿಗೂ ಮತ್ತು ಜಗತ್ತಿಗೂ ಕೂಡ ಅಷ್ಟೇ ವ್ಯತ್ಯಾಸವಿದೆ. ಅಂದರೆ ಆತ್ಮವು ಅವ್ಯಕ್ತ (ಕಾಣಿಸದಿದ್ದರೂ ಇರುವ ಮೂಲ), ಪ್ರಪಂಚವು ವ್ಯಕ್ತ (ಕಾಣಿಸುವಂತಹುದು). ನಿಮ್ಮ ಮನಸ್ಸಿಗೆ ಅನುಗುಣವಾಗಿ ಅದು ಬದಲಾಗುತ್ತಿರುತ್ತದೆ, ಆದರೆ ಆತ್ಮವು ಎಂದಿಗೂ ಬದಲಾಗುವುದಿಲ್ಲ.

ಕನ್ನಡಿ ದೂರದಲ್ಲಿದ್ದಾಗ ಅದರಲ್ಲಿ ನೋಡುವಾಗ ನೀವು ಕೂಡ ತುಂಬಾ ದೂರದಲ್ಲಿರುವಂತೆ ಕಾಣಿಸುತ್ತದೆ. ಆದರೆ ನೀವು ಅಷ್ಟು ದೂರದಲ್ಲಿ ಇರುವುದಿಲ್ಲ, ಹತ್ತಿರದಲ್ಲೇ ಇರುತ್ತೀರಿ. ಈ ಕನ್ನಡಿಯ ದೂರ ಮತ್ತು ಹತ್ತಿರದ ಕಾರಣದಿಂದ ನೀವು ಬೇರೆಯಾಗಿ ಕಾಣಿಸುತ್ತಿದ್ದೀರಿ. ಬಲಗಡೆ ಇರುವುದು ಎಡಗಡೆಯಾಗಿ, ಎಡಗಡೆ ಇರುವುದು ಬಲಗಡೆಯಾಗಿ ಕಾಣಿಸುತ್ತದೆ.

ಕಾಣಿಸುತ್ತಿದ್ದಾರೆ. ಅಂದರೆ ಅಲ್ಲಿ ಕನ್ನಡಿಯ ದೋಷದಿಂದ ಬದಲಾದಂತೆ ಕಾಣುತ್ತಿದ್ದಾರೆಯೇ ಹೊರತು, ನೀವು ನೀವಾಗಿಯೇ ಇದ್ದೀರಿ. ನೀವು ಗಮನಿಸಿದರೆ, ಈ ಪ್ರಪಂಚದಲ್ಲಿ ಒಬ್ಬ ವ್ಯಕ್ತಿಯು ಒಬ್ಬರಿಗೆ ಒಳ್ಳೆಯವನಾಗಿ ಕಾಣುತ್ತಾನೆ, ಅದೇ ವ್ಯಕ್ತಿಯು ಇನ್ನೊಬ್ಬರಿಗೆ ಕೆಟ್ಟವನಾಗಿ ಕಾಣುತ್ತಾನೆ. ಹಾಗಾದರೆ ಒಬ್ಬನಿಗೆ ಒಳ್ಳೆಯವನಾಗಿ ಕಂಡಾಗ ಇನ್ನೊಬ್ಬನಿಗೆ ಏಕೆ ಕೆಟ್ಟವನಾಗಿ ಕಂಡನು? ಅಂದರೆ ಅವರ ಮನಸ್ಸಿನ ಸ್ಥಿತಿಯನ್ನು (ಆಧರಿಸಿ) ಅವರು ಕಾಣಿಸುತ್ತಾರೆ. ಈ ಸೃಷ್ಟಿಯೆಲ್ಲವೂ ಮನಸ್ಸಿನ ಸ್ಥಿತಿಯನ್ನೇ ಅವಲಂಬಿಸಿದೆ ಎಂಬ ವಿಷಯವನ್ನೇ ನಮಗೆ ಶಂಕರಾಚಾರ್ಯರು ತಿಳಿಸಿದ್ದಾರೆ. ಗುರುಗಳು ಪದೇ ಪದೇ ಇದೇ ವಿಷಯವನ್ನು ಏಕೆ ಹೇಳುತ್ತಿದ್ದಾರೆಂದರೆ, ಮನಸ್ಸಿನ ಪ್ರಭಾವದಿಂದಾಗಿ ಅಸತ್ಯವನ್ನು ಸತ್ಯವೆಂದು ಭಾವಿಸಿ, ಅಸತ್ಯದಲ್ಲೇ ಜೀವಿಸುತ್ತಾ, ಕೋರಿಕೆಗಳ ಹಿಂದೆ ಬೀಳುತ್ತಾ, ಸತ್ಯವಾದ ಮತ್ತು ನಿತ್ಯವಾದ ಆತ್ಮವನ್ನು ಮರೆಯುತ್ತಿದ್ದಾರೆ. ಆದ್ದರಿಂದ ಈ ಪ್ರಪಂಚವೆಲ್ಲವೂ ಮಿಥ್ಯ. ಪ್ರಪಂಚವು ಮನಸ್ಸಿನ ಮೇಲಿದೆಯೇ ಹೊರತು ಆತ್ಮದ ಮೇಲಲ್ಲ. ಆತ್ಮವು ಕ್ಷಣಕ್ಷಣಕ್ಕೂ ಬದಲಾಗುವುದಿಲ್ಲ, ಆದ್ದರಿಂದ ಆತ್ಮವೇ ಸತ್ಯ, ಆತ್ಮವೇ ನಿತ್ಯ.

ಉದಾಹರಣೆ: ಒಬ್ಬ ಜಾದೂಗಾರನನ್ನು (Magician) ತೆಗೆದುಕೊಂಡರೆ, ಅವನು ಮ್ಯಾಜಿಕ್ ಮಾಡುತ್ತಿರುತ್ತಾನೆ. ತನ್ನ ಮ್ಯಾಜಿಕ್ ಮೂಲಕ ಅಲ್ಲಿರುವ ವ್ಯಕ್ತಿಯನ್ನು ಮಾಯ ಮಾಡುತ್ತಾನೆ, ಗರಗಸದಿಂದ ಸೀಳಿದಂತೆ ತೋರಿಸುತ್ತಾನೆ, ಇಲ್ಲದ ಹೂವುಗಳನ್ನು ಮತ್ತು ಪಕ್ಷಿಗಳನ್ನು ಸೃಷ್ಟಿಸುತ್ತಾನೆ. ಅಲ್ಲಿ ನಿಮಗೆ ಕಾಣುವುದೆಲ್ಲಾ ನಿಜವಲ್ಲ, ಅದು ನಿಜವೆಂಬ ಭ್ರಮೆಯಲ್ಲಿ ನಿಮ್ಮನ್ನು ಬೀಳಿಸುತ್ತಾನೆ.

ಹಾಗೆಯೇ ಈ ಪ್ರಪಂಚ ಕೂಡ ಒಂದು ಮಿಥ್ಯ. ನಿಮ್ಮ ಮನಸ್ಸಿನ ಪ್ರಭಾವದಿಂದಲೇ ಇರುವುದು ಇಲ್ಲದಂತೆ, ಇಲ್ಲದಿರುವುದು ಇರುವಂತೆ ಕಾಣಿಸುತ್ತದೆ. ಇದನ್ನು 'ಭಗವಂತನ ಆಟ' ಎಂದು ಹೇಳಬಹುದು.

ಮತ್ತೆ ಈ ರೀತಿಯಾಗಿ ಈ ಪ್ರಪಂಚ ಮಿಥ್ಯ ಎಂದರೆ, ನೀವು ನೋಡುತ್ತಿರುವಾಗ ಈ ಪ್ರಪಂಚ ಇದೆ. ನೀವು ನೋಡದ ಗಾಢ ನಿದ್ರೆಯಲ್ಲಿದ್ದಾಗಲೂ ಈ ಪ್ರಪಂಚ ಇರುತ್ತದೆ, ಆದರೆ ಜಾಗ್ರತ ಅವಸ್ಥೆಯಲ್ಲಿದ್ದಾಗ ಮಾತ್ರ ನೀವು ಮನಸ್ಸು ಇರುವುದರಿಂದಲೇ ಈ ಪ್ರಪಂಚ ಕಾಣಿಸುತ್ತದೆ. ಆದರೆ ಸುಷುಪ್ತಿ (ಗಾಢ ನಿದ್ರೆ) ಅವಸ್ಥೆಯಲ್ಲಿ ಮನಸ್ಸು ಇರುವುದಿಲ್ಲ, ಆದ್ದರಿಂದ ಈ ಪ್ರಪಂಚ ಕಾಣಿಸುವುದಿಲ್ಲ. ಹಾಗೆಂದ ಮಾತ್ರಕ್ಕೆ ಪ್ರಪಂಚವೇ ಇಲ್ಲ ಎಂದು ಅರ್ಥವಲ್ಲವಲ್ಲವೇ?

ಅದೇ ರೀತಿ ಬಿಂಬಕ್ಕೂ, ಪ್ರತಿಬಿಂಬಕ್ಕೂ ವ್ಯತ್ಯಾಸವಿದೆ. ನೀವು ಕನ್ನಡಿಯ ಮುಂದೆ ನಿಂತಾಗ ಮಾತ್ರ ಪ್ರತಿಬಿಂಬ ಇರುತ್ತದೆ, ಅದೇ ಕನ್ನಡಿಯನ್ನು ಪಕ್ಕಕ್ಕೆ ಸರಿಸಿದರೆ ಪ್ರತಿಬಿಂಬ ಇರುವುದಿಲ್ಲ. ಹಾಗೆಯೇ ನಿಮ್ಮ ಮನಸ್ಸು ಇರುವಾಗ ಪ್ರಪಂಚವಿದೆ, ನಿಮ್ಮ ಮನಸ್ಸಿನಲ್ಲಿ ಯಾವುದೇ ಆಲೋಚನೆಗಳು ಅಥವಾ ಸಂಕಲ್ಪಗಳಿಲ್ಲದೆ ಗಾಢ ನಿದ್ರೆಯಲ್ಲಿದ್ದಾಗ ಪ್ರಪಂಚವೇ ಇಲ್ಲ. ಇದ್ದೂ ಇಲ್ಲದಂತೆ ಇರುವುದೇ 'ಮಿಥ್ಯ'. ಹಾಗೆಯೇ ವಿವಿಧ ರೂಪಗಳಲ್ಲಿ ಪ್ರತ್ಯಕ್ಷವಾಗಿ ಕಾಣಿಸುತ್ತಿರುವ ಈ ವಿಶ್ವವೆಲ್ಲವೂ ಮಿಥ್ಯೆ, ಇದು ಎಷ್ಟೋ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ.

ಆತ್ಮಕ್ಕೆ ಕಾಣಿಸುವಂಥದ್ದು, ಕೇಳಿಸುವಂಥದ್ದು ಎಲ್ಲವೂ ಮಿಥ್ಯೆ. ಶಾಶ್ವತವಾಗಿ ಇರುವುದೇ ಸತ್ಯ, ಶಾಶ್ವತವಲ್ಲದವುಗಳೆಲ್ಲವೂ ಕ್ಷಣಕಾಲದ ಮಿಥ್ಯೆ. ಜಾಗೃತಾವಸ್ಥೆಯಲ್ಲಿ ಕಾಣಿಸುತ್ತದೆ, ಸ್ವಪ್ನಾವಸ್ಥೆಯಲ್ಲಿ (ಕನಸಿನಲ್ಲಿ) ಕಾಣಿಸುತ್ತದೆ, ಆದರೆ ಸುಷುಪ್ತಿಯಲ್ಲಿ ಕಾಣಿಸುವುದಿಲ್ಲ. ಮತ್ತೆ ನಿಮಗೆ ಎಚ್ಚರವಾದ ತಕ್ಷಣವೇ ಕಾಣಿಸುತ್ತದೆ. ಈ ಸೃಷ್ಟಿಯಲ್ಲಿ ಮನುಷ್ಯರಾಗಲಿ, ಜೀವಿಗಳಾಗಲಿ ಅಥವಾ ಯಾವುದೇ ಪ್ರಾಣಿ ಸಂಕುಲವಾಗಲಿ; ಕೆಲವು ಕಾಲ ಇದ್ದು, ಕೆಲವು ಕಾಲ ಇಲ್ಲದೇ ಹೋದರೆ ಅದು ಮಿಥ್ಯೆ. ಶಾಶ್ವತವಾಗಿ ಇರುವುದೇ ಸತ್ಯ, ಅದೇ "ಆತ್ಮ" ಎಂದು ಶಂಕರಾಚಾರ್ಯರು ಬೋಧಿಸಿದ್ದಾರೆ.

ಸಹಜವಾಗಿ ಎಲ್ಲರೂ ಏನಂದುಕೊಳ್ಳುತ್ತಾರೆ ಎಂದರೆ ಈ ಶರೀರ ಶಾಶ್ವತ,

ಮನಸ್ಸು ಶಾಶ್ವತ, ಬುದ್ಧಿ ಶಾಶ್ವತ ಎಂದು ಭಾವಿಸುತ್ತಾರೆ. ಆದರೆ ಕಣ್ಣಿಗೆ ಕಾಣಿಸುವ ಈ ದೇಹ ಅಶಾಶ್ವತ, ಈ ದೇಹದ ಒಳಗಿರುವ ಆತ್ಮ ಮಾತ್ರ ಶಾಶ್ವತ. ಈ ಶರೀರ ಕಣ್ಣಿಗೆ ಕಾಣಿಸುತ್ತದೆ, ಸತ್ಯವೆಂದು ಅನ್ನಿಸುತ್ತದೆ, ಆದರೆ ಇದು ಕೇವಲ ಕೆಲವು ಕಾಲ ಮಾತ್ರ ಈ ಭೂಮಿಯ ಮೇಲಿರುತ್ತದೆ, ಆದ್ದರಿಂದ ಇದು ಮಿಥ್ಯೆ. ಕಣ್ಣಿಗೆ ಕಾಣಿಸದ "ಆತ್ಮ"ವೇ ಸತ್ಯ.

ಶಂಕರಾಚಾರ್ಯರು ಹೇಳಿದ ಇನ್ನೊಂದು ಉದಾಹರಣೆಯನ್ನು ನೋಡೋಣ. ಆತ್ಮದ ಒಂದು ಲಕ್ಷಣ **"ಸಚ್ಚಿದಾನಂದ ಸ್ವರೂಪ": 'ಸತ್' ಎಂದರೆ ಸತ್ಯವಾದದ್ದು, 'ಚಿತ್' ಎಂದರೆ ಚೈತನ್ಯವಂತವಾದದ್ದು (ತಿಳಿವಳಿಕೆ), 'ಆನಂದ' ಎಂದರೆ ಆನಂದ ಸ್ವರೂಪ. ಆನಂದವಾಗಿ ಇರುವುದೇ ಸಚ್ಚಿದಾನಂದ ಸ್ವರೂಪ:** ಅವ್ಯಕ್ತವಾಗಿರುವ (ಕಣ್ಣಿಗೆ ಕಾಣದ) ಆತ್ಮದ ಲಕ್ಷಣವೇ ಸಚ್ಚಿದಾನಂದ ಸ್ವರೂಪ. ವ್ಯಕ್ತವಾದ ಆತ್ಮ ಎಂದ–ರೆ, ನೀವು ಕನ್ನಡಿಯಲ್ಲಿ ನೋಡಿಕೊಂಡಾಗ ಬಲವು ಎಡವಾಗಿ, ಎಡವು ಬಲವಾಗಿ ಹೇಗೆ ಕಾಣಿಸುತ್ತದೆಯೋ, ಹಾಗೆಯೇ ವ್ಯಕ್ತವಾದ ಆತ್ಮ ಎಂದರೆ ಸತ್ಯವು ಅಸತ್ಯವಾಗಿ ಹೋಗುತ್ತದೆ. ಅಂದರೆ ಆತ್ಮವು ಅಸತ್ಯ, ಜಡ ಮತ್ತು ದುಃಖವಾಗಿ ಪರಿಣಮಿಸುತ್ತದೆ. ಉದಾಹರಣೆಗೆ ನೀವು ಗಮನಿಸಿದರೆ, ಒಂದು ಮರದಲ್ಲಿ ಆತ್ಮಶಕ್ತಿ ಇರುತ್ತದೆ ಆದರೆ ಅದು ಕದಲಲಾರದು, ಅಂದರೆ ಜಡವಾಗಿ ಇರುತ್ತದೆ. ಹಾಗೆಯೇ ಒಬ್ಬ ಮನುಷ್ಯನು ವ್ಯಕ್ತವಾಗುತ್ತಿದ್ದಾನೆ (ಜೀವಿಸುತ್ತಿದ್ದಾನೆ) ಆದರೆ ದುಃಖದಲ್ಲೇ ಇದ್ದಾನೆ. ಏಕೆಂದರೆ ಆತ್ಮಶಕ್ತಿ ಇಲ್ಲದಿರುವುದು ಮತ್ತು ಅಜ್ಞಾನದಲ್ಲಿ ಇರುವುದೇ ಇದಕ್ಕೆ ಕಾರಣ. ಅದಕ್ಕೇ ಆತ್ಮವು ಅವ್ಯಕ್ತದಲ್ಲಿ ಸಚ್ಚಿದಾನಂದ, ವ್ಯಕ್ತದಲ್ಲಿ ಅಸತ್ಯ, ಜಡ ಮತ್ತು ದುಃಖ. ವ್ಯಕ್ತವಾದುದು ನಶಿಸಿಹೋಗುತ್ತದೆ, ಅವ್ಯಕ್ತವಾದುದು ಶಾಶ್ವತ.

ಅದಕ್ಕೇ ಅವ್ಯಕ್ತವಾದ ಆತ್ಮ ಎಂದರೆ ಕಣ್ಣಿಗೆ ಕಾಣದ ಆತ್ಮವು ಸಚ್ಚಿದಾನಂದ ಸ್ವರೂಪವಾದರೆ, ವ್ಯಕ್ತವಾದ ಎಂದರೆ ಕಣ್ಣಿಗೆ ಕಾಣುವ ಈ ಜಗತ್ತು ಅಸತ್ಯ, ಜಡ ಮತ್ತು ದುಃಖ ಎಂಬ ಮೂರು ಲಕ್ಷಣಗಳನ್ನು ಹೊಂದಿರುತ್ತದೆ. ಲೋಕದಲ್ಲಿ ಮಾನವನಿಗೆ ದುಃಖವಿದೆ, ಕೆಲವು ವಸ್ತುಗಳು ಜಡವಾಗಿವೆ, ಕೆಲವು ಹುಟ್ಟಿದ ತಕ್ಷಣವೇ ಉದುರಿಹೋಗುತ್ತವೆ (ಶಾಶ್ವತವಲ್ಲ). ಈ ರೀತಿಯಾಗಿ ಅವ್ಯಕ್ತ ರೂಪಕ್ಕಿರುವ ಲಕ್ಷಣಗಳನ್ನು ಹೇಳಿದ್ದಾರೆ. ವ್ಯಕ್ತ ರೂಪಕ್ಕಿರುವ ಲಕ್ಷಣಗಳನ್ನು ಕೂಡ ಶಂಕರಾಚಾರ್ಯರು ಹೇಳುತ್ತಾ, ಇನ್ನೂ ಎಷ್ಟೋ ವಿಧವಾಗಿ ಸ್ವಲ್ಪ ಕಾಲ ಇದ್ದು ಆಮೇಲೆ ಇಲ್ಲದಿರುವುದು, ಕೆಲವು ದಿನಗಳಿದ್ದು ನಂತರ ಇಲ್ಲವಾಗುವುದು – ಇದೆಲ್ಲವೂ ಜಗತ್ತೇ... ಆತ್ಮ ಒಂದೇ ಸತ್ಯ ಮತ್ತು ಬದಲಾವಣೆ ಇಲ್ಲದ್ದು. ಬದಲಾವಣೆ ಇರುವ ಪ್ರತಿಯೊಂದೂ ನಶಿಸಿಹೋಗುತ್ತದೆ. ರೂಪವಿರುವ ಪ್ರತಿಯೊಂದೂ ನಾಶವಾಗುತ್ತದೆ. ಸೃಷ್ಟಿಸಲ್ಪಟ್ಟ ಪ್ರತಿಯೊಂದಕ್ಕೂ ನಾಶವಿರುವುದರಿಂದಲೇ "ಜಗತ್ತು ಮಿಥ್ಯ, ಬ್ರಹ್ಮ (ಆತ್ಮ)

ಸತ್ಯ" ಎಂದು ಒಂದು ಉತ್ತಮ ಉದಾಹರಣೆಯೊಂದಿಗೆ ನಿಮಗೆ ಬೋಧಿಸಿದ್ದಾರೆ. ಈ ಸೃಷ್ಟಿಯಲ್ಲಿ ಪ್ರತಿಯೊಂದೂ ಅಸತ್ಯ ರೂಪ, ನಶಿಸಿಹೋಗುತ್ತದೆ ಎಂದು ನಿಮಗೆ ತಿಳಿದಿದೆ. ಅದಕ್ಕೇ ಈ ಸೃಷ್ಟಿ ಎಂಬುದು ಅಸತ್ಯ, ಆತ್ಮವೇ ಸತ್ಯ ಎಂಬುದು ನಿಮಗೆ ಚೆನ್ನಾಗಿ ಅರ್ಥವಾಗಿದೆ.

ಈ ಸೃಷ್ಟಿಯಲ್ಲಿ ಚರಾಚರ ಅಂದರೆ ಸಂಚರಿಸುವವು ಮತ್ತು ಸಂಚರಿಸದವು ಎರಡೂ ಇವೆ. ಉದಾಹರಣೆಗೆ ಬೆಟ್ಟಗಳು, ವೃಕ್ಷಗಳು ಸಂಚರಿಸುವುದಿಲ್ಲ. ಅವು ಜಡವಾಗಿರುತ್ತವೆ. ಅವು ಆ ಪರಮಾತ್ಮನ ಚೈತನ್ಯದಿಂದಲೇ ವ್ಯಕ್ತವಾಗುತ್ತಿದ್ದರೂ ಸಹ, ಮೂಲತಃ ಅವು ಜಡವಸ್ತುಗಳು. ದುಃಖ ಎಂಬುದು ಪ್ರತಿ ಜೀವಿಗೆ ಇರುತ್ತದೆ, ಮನುಷ್ಯನಿಗೂ ಇರುತ್ತದೆ. ಪ್ರಾಣಿ ಪಕ್ಷಿಗಳಿಗೆ ದುಃಖ ಇರುವುದಿಲ್ಲ ಎಂದು ಕೆಲವರು ಅಂದುಕೊಳ್ಳುತ್ತಾರೆ. ಆದರೆ ಮನುಷ್ಯ ಅವುಗಳನ್ನು ಸಂಹರಿಸುತ್ತಲೇ ಇರುತ್ತಾನೆ ಅಲ್ವಾ? ತಿನ್ನುವುದಕ್ಕೋಸ್ಕರ ಕೊಲ್ಲುತ್ತಾ ಇರುತ್ತಾನೆ. ಸಾಯುವ ಮುನ್ನ ಅವು ಬಹಳ ದುಃಖವನ್ನು ಅನುಭವಿಸುತ್ತವೆ. ಏಕೆಂದರೆ ಮನುಷ್ಯ ಅವುಗಳ ಹತ್ತಿರ ಹೋಗುವಾಗಲೇ ಅವನ ಮನಸ್ಸಿನ ಆಲೋಚನೆ ಆ ಜೀವಿಗಳಿಗೆ ತಿಳಿದುಹೋಗುತ್ತದೆ ಮತ್ತು ಅವು ಎಷ್ಟೋ ವೇದನೆಗೆ ಒಳಗಾಗುತ್ತವೆ. ಆದ್ದರಿಂದ ಜೀವಿಗಳು ದುಃಖ ಅನುಭವಿಸುತ್ತವೆ ಎಂದು ನೀವು ತಿಳಿದುಕೊಳ್ಳಬೇಕು.

ಮನುಷ್ಯನು ಸತ್ಯವೇನೆಂದು ತಿಳಿಯದೆ, ಶಾಶ್ವತವಾದದ್ದು ಯಾವುದೆಂದು ಅರಿಯದೆ, ಈ ಪ್ರಪಂಚವೇ ಶಾಶ್ವತವೆಂದು ಬಂಧನಗಳಲ್ಲಿ ಸಿಕ್ಕಿಹಾಕಿಕೊಂಡು, ರಾಗ-ದ್ವೇಷಗಳೊಂದಿಗೆ ಇರುವುದರಿಂದ ಯಾವಾಗಲೂ ದುಃಖದಲ್ಲಿಯೇ ಇರುತ್ತಾನೆ. ಅದಕ್ಕಾಗಿಯೇ "ಜಗತ್ತು ಮಿಥ್ಯ" ಎಂದು ಶಂಕರಾಚಾರ್ಯರು ಒಂದೇ ಮಾತಿನಲ್ಲಿ ಹೇಳಿದ್ದಾರೆ. ಈ ಸೃಷ್ಟಿಯಲ್ಲಿ ಸೃಷ್ಟಿಸಲ್ಪಟ್ಟವುಗಳೆಲ್ಲವೂ ಕೊನೆಗೆ ದುಃಖವನ್ನೇ ಉಳಿಸುತ್ತವೆ. ಮನುಷ್ಯನು ಅಜ್ಞಾನದಲ್ಲಿ ಇರುವಾಗ ಪ್ರತಿಯೊಂದೂ ತನಗೆ ಬೇಕೆಂದು ಬಯಸುತ್ತಾನೆ. ಆ ಕೋರಿಕೆಗಳನ್ನೇ ಸಂಕಲ್ಪಗಳನ್ನಾಗಿ ಮಾಡಿಕೊಂಡು ದುಃಖದಲ್ಲಿ ಮುಳುಗಿರುತ್ತಾನೆ. ಆದರೆ ಯಾವಾಗ ಯಾವುದೇ ಸಂಕಲ್ಪ ಅಥವಾ ಕೋರಿಕೆಗಳಿಲ್ಲದೆ ಮನಸ್ಸನ್ನು ನಿಶ್ಚಲವಾಗಿಟ್ಟುಕೊಳ್ಳುತ್ತಾನೋ, ಆಗಲೇ ತಾನು 'ಆತ್ಮ' ಎಂದು ತಿಳಿದುಕೊಳ್ಳುತ್ತಾನೆ ಮತ್ತು ಆತ್ಮ ದರ್ಶನ ಪಡೆಯುತ್ತಾನೆ.

ನಾವು ಅಸತ್ಯವಾದುದನ್ನು ಬಯಸಬಾರದು, ಅದರ ಮೂಲಕವೂ ದುಃಖ ಬರುತ್ತದೆ. ಸೃಷ್ಟಿಯಲ್ಲಿರುವ ಪ್ರತಿಯೊಂದೂ ಅಸತ್ಯವೇ; ರೂಪವಿರುವುದು ಅಸತ್ಯ, ಸೃಷ್ಟಿಯಾದದ್ದೆಲ್ಲವೂ ಅಸತ್ಯ. ಎಷ್ಟೋ ಜನ್ಮಗಳಲ್ಲಿ ಎಷ್ಟೋ ಪಾಠಗಳನ್ನು ಕಲಿಯುತ್ತಾ, ಕೊನೆಗೆ ಮಾನವ ಜೀವಿಯಾಗಿ ಹುಟ್ಟಿದ ಮನುಷ್ಯನು ದೇವರಾಗಿ ಬೆಳೆಯಲು,

ತಾವರೆ ಎಲೆಯ ಮೇಲಿನ ನೀರಿನ ಹನಿಯಂತೆ ಬದುಕಬೇಕು. ಅಂದರೆ, ಈ ಪ್ರಪಂಚದಲ್ಲಿಯೇ ಇದ್ದರೂ ಯಾವುದಕ್ಕೂ ಅಂಟಿಕೊಳ್ಳದೆ ಜೀವನ ನಡೆಸಬೇಕು ಪಂಚಭೂತಗಳಿಂದ ನಿರ್ಮಿತವಾದ ಈ ಸೃಷ್ಟಿಯನ್ನು ನೀವು ಅನುಭವಿಸುತ್ತಾ, ನೀವು ಯಾರೆಂದು ತಿಳಿದುಕೊಳ್ಳಲು ಭೂಮಿಯ ಮೇಲೆ ಬಂದಿದ್ದೀರಿ. ಆದರೆ ಇವು ಕೇವಲ ಅನುಭವಿಸಲಿಕ್ಕಾಗಿಯೇ ಇವೆ; ಇವು ನನ್ನದಾಗಬೇಕು ಎಂದುಕೊಂಡರೆ ನೀವು ದುಃಖದಲ್ಲಿಯೇ ಉಳಿಯುತ್ತೀರಿ.

ಈ ಶರೀರವು ಶಾಶ್ವತವಲ್ಲ, ನೀವು ಬಯಸುತ್ತಿರುವುದು ಶಾಶ್ವತವಲ್ಲ. ಅಶಾಶ್ವತವಾದ ಶರೀರದೊಂದಿಗೆ ಶಾಶ್ವತವಾದ ಭಗವಂತನನ್ನು ತಿಳಿದುಕೊಳ್ಳುವುದಕ್ಕಾಗಿಯೇ ನೀವು ಈ ಭೂಮಿಗೆ ಬಂದಿದ್ದೀರಿ. ಅದಕ್ಕಾಗಿಯೇ ನಿಮಗೆ ಕಾಣಿಸುತ್ತಿರುವುದೆಲ್ಲವೂ ಮಿಥ್ಯೆ. ಇದು ತಿಳಿಯದ ಮನುಷ್ಯನು ಈ ಪ್ರಪಂಚವು ಶಾಶ್ವತವೆಂದು ಭಾವಿಸಿ ದುಃಖದಲ್ಲಿ ಸಿಲುಕುತ್ತಿದ್ದಾನೆ.

ನಿಮ್ಮಲ್ಲಿ ಆಸೆ ಯಾವಾಗ ಹುಟ್ಟುತ್ತದೆಯೋ, ಆಗ ಪ್ರಪಂಚವು ಸತ್ಯವಾಗಿ ತೋರುತ್ತದೆ. ಅಂದರೆ, ಈ ಸೃಷ್ಟಿಯಲ್ಲಿ ಯಾವುದನ್ನಾದರೂ "ಇದು ನನಗೆ ಬೇಕು, ಇದು ನನ್ನ ಸ್ವಂತದ್ದು" ಎಂದು ಯಾವಾಗ ಅಂದುಕೊಳ್ಳುತ್ತೀರೋ, ಆ ಕ್ಷಣವೇ ನೀವು ಈ ಪ್ರಪಂಚವು ಸತ್ಯವೆಂಬ ಭಾವನೆಯಲ್ಲಿ ಉಳಿದುಬಿಡುತ್ತೀರಿ.

"ನಾನು ಸಚ್ಚಿದಾನಂದ ಸ್ವರೂಪಿ" ಎಂದು ತಿಳಿದುಕೊಳ್ಳಬೇಕೆಂದರೆ, ಈ ಜಡ ಪದಾರ್ಥಗಳಿಂದ, ಈ ಅಸತ್ಯವಾದ, ಈ ದುಃಖಕರವಾದ ಜಗತ್ತಿನಿಂದ ಏನನ್ನೂ ಬಯಸದೆ, ಇರುವುದೆಲ್ಲವೂ ಅನುಭವಿಸಲಿಕ್ಕಾಗಿಯೇ ಸೃಷ್ಟಿಯಾಗಿದೆ ಎಂದು ಅರಿತುಕೊಳ್ಳಬೇಕು. ಮಾನವನು ಮಾಧವನಾಗಬೇಕೆಂದರೆ ಇರುವುದರಲ್ಲಿಯೇ ತೃಪ್ತಿಯಿಂದ ಬದುಕುತ್ತಾ ಸಾಧನೆ ಮಾಡಬೇಕು. ಶಂಕರಾಚಾರ್ಯರು ಇಷ್ಟು ವಿವರವಾಗಿ ತಿಳಿಸಿದ ಮೇಲೆ, ನೀವು ನಿತ್ಯವೂ ಧ್ಯಾನ ಮಾಡಬೇಕು ಮತ್ತು ಜ್ಞಾನವನ್ನು ಪಡೆಯಬೇಕು. ಸ್ವಲ್ಪವೇ ಎಚ್ಚರ ತಪ್ಪಿದರೂ ಮಾಯೆಗೆ ವಶರಾಗಿ ಮತ್ತೆ ಈ ಜಗತ್ತನ್ನೇ ಬಯಸುತ್ತೀರಿ. ನಿಮ್ಮ ಜೀವನದಲ್ಲಿ ನಿತ್ಯವೂ ಆಹಾರ ಮತ್ತು ನಿದ್ರೆ ಹೇಗೆ ಒಂದು ಭಾಗವಾಗಿದೆಯೋ, ಹಾಗೆಯೇ ಧ್ಯಾನ ಮಾಡುವುದು ಮತ್ತು ಜ್ಞಾನ ಪಡೆಯುವುದು ಕೂಡ ಒಂದು ಭಾಗವಾಗಬೇಕು. ಶಂಕರಾಚಾರ್ಯರ ಮೂಲಕ ಜಗತ್ತಿನ ಲಕ್ಷಣಗಳನ್ನು ಮತ್ತು ಆತ್ಮನ ಲಕ್ಷಣಗಳನ್ನು ಬಹಳ ವಿವರವಾಗಿ ತಿಳಿದುಕೊಂಡಿದ್ದೀರಿ. ಇದರಿಂದ ನಿಮಗೆ "ಜಗತ್ ಮಿಥ್ಯೆ, ಬ್ರಹ್ಮ ಸತ್ಯ" ಎಂಬುದು ಚೆನ್ನಾಗಿ ಅರ್ಥವಾಗುತ್ತದೆ.

ಶ್ರೀರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು

1.	ಅಹಿಂಸೆ ಮತ್ತು ಶಾಖಾಹಾರ	ರೂ.20
2.	ನವವಿಧ ಧರ್ಮಗಳ	ರೂ.40
3.	ಧ್ಯಾನ	ರೂ.60
4.	ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ	ರೂ.30
5.	ಭಾಗವತ ಸನ್ನಿವೇಶಗಳ ಅಂತರಾರ್ಥ	ರೂ.30
6.	ಶಿರಡಿ ಸಾಯಿ ಸಂದೇಶಗಳು	ರೂ.30
7.	ಪ್ರಾಣ ಶಕ್ತಿ	ರೂ.100
8.	ಜೀವನದ ಸೂಕ್ಷ್ಮಗಳು	ರೂ.100
9.	ಸಂಘಂ ಶರಣಂ ಗಚ್ಛಾಮಿ	ರೂ.300
10.	ತುಳಸಿ ದಳ (i)	ರೂ.200
11.	ತುಳಸಿ ದಳ (ii)	ರೂ.220
12.	ಆಶ್ಚರ್ಯ ಆಶ್ಚರ್ಯ	ರೂ.40
13.	ದುಃಖ ನಿವಾರಣೆಯ ಮಾರ್ಗ	ರೂ.70
14.	ಧ್ಯಾನದಿಂದಲೇ ಜ್ಞಾನ	ರೂ.70
15.	ಬ್ರಹ್ಮಜ್ಞಾನ	ರೂ.70
16.	ಜ್ಞಾನ ಜ್ಯೋತಿ	ರೂ.90
17.	ಗೈಡಿಂಗ್	ರೂ.100
18.	ಸಂಕಲ್ಪವೆಂದರೇನು?	ರೂ.50
19.	ಕರ್ಮ ಸಿದ್ಧಾಂತ	ರೂ.70
20.	ಜ್ಞಾನ ಕುಸುಮಗಳು	ರೂ.90
21.	ಆಲೋಚನಾ ಶಕ್ತಿ	ರೂ.40
22.	ಆತ್ಮವಿಜ್ಞಾನ ಮತ್ತು ಮೃತ್ಯುವೇ ಇಲ್ಲ	ರೂ.40
23.	ಆಧ್ಯಾತ್ಮಿಕ ಶಾಸ್ತ್ರ	ರೂ.40
24.	ಮರಣದ ನಂತರ ನಮ್ಮ ಜೊತೆ ಬರುವುದು	ರೂ.60
25.	ಜ್ಞಾನ ಯುಗ	ರೂ.60
26.	ಸೇತು ವಿಜ್ಞಾನ	ರೂ.40
27.	ಮರಣಿಸುವ ಮುಂಚೆಯೇ ಮರಣಿಸಬೇಕು	ರೂ.130
28.	ಅತೀಂದ್ರಿಯ ಶಕ್ತಿಗಳು	ರೂ.40
29.	ಆಲೋಚಿಸಿ	ರೂ.70

30.	ನಿರ್ವಾಣ ಮಾರ್ಗ	ರೂ.60
31.	ಸತ್ಯ	ರೂ.40
32.	ಆರ್ಥಿಕ ಪರಿಸ್ಥಿತಿ	ರೂ.40
33.	ಚಕ್ರಗಳು	ರೂ.30
34.	ಭೂತದಯೇ ಮತ್ತು ದೈವತ್ವ	ರೂ.80
35.	ಮೌನ ಧ್ಯಾನ	ರೂ.40
36.	ಗುರುವನ್ನು ಗುರುತಿಸುವುದು ಹೇಗೆ?	ರೂ.30
37.	ತ್ರೀ ವಿಧಗಳು	ರೂ.70
38.	ಈ ಜೀವನವಿರುವುದು ಏಕೆ?	ರೂ.50
39.	ಧ್ಯಾನವೆಂದರೆ?	ರೂ.60
40.	ಮೆಹರ್ ಬಾಬಾ ಸಂದೇಶ	ರೂ.80
41.	ಬುದ್ಧನ ಸೂಕ್ತಿಗಳು	ರೂ.60
42.	ಸತ್ಯಮಾರ್ಗ	ರೂ.80
43.	ಶಾಸ್ತ್ರಗಳ ಅಂತರಾತ್ಮ	ರೂ.80
44.	ಜೀವನ ಶಾಸ್ತ್ರ	ರೂ.100
45.	ಮೂರು ರೀತಿಯ ಜೀವನಗಳು	ರೂ.50
46.	ಆತ್ಮಜ್ಞಾನ ಹೊಂದಲು ಸಾಧ್ಯವಾಗದಿರಲು ಕಾರಣಗಳು.	ರೂ.70
47.	ಮನಸ್ಸಿನ ಸ್ಥಿತಿಗಳು	ರೂ.40
48.	ಮಾಸ್ಟರ್ ಆಗಿ ಬೆಳೆಯಬೇಕೆಂದರೆ	ರೂ.50
49.	ಕಬೀರರ ಸಂದೇಶಗಳು–1	ರೂ.70
50.	ಧರ್ಮ ಸೂಕ್ಷ್ಮಗಳು	ರೂ.40
51.	ಭಗವಂತನಿಗೆ ಇಷ್ಟರಾಗಬೇಕೆಂದರೆ	ರೂ.50
52.	ಚಾಂಪಿಯನ್ ಆಗಬೇಕೆಂದರೆ.	ರೂ.30
53.	ವಿಧುರನ ಸಂದೇಶಗಳು.	ರೂ.40
54.	ಆಶ್ಚರ್ಯಕರವಾದ ವಿಷಯಗಳು.	ರೂ.60
55.	ಅರಿಹಂತ್	ರೂ.50
56.	ಧಾರ್ಮಿಕ ಜೀವನ ಎಂದರೆ?	ರೂ.60
57.	ಮಾತೆ ಮಾಣಿಕೇಶ್ವರಿ ಸಂದೇಶಗಳು–1	ರೂ.60
58.	ಗುರು ಪೂರ್ಣಿಮೆ ವಿಶಿಷ್ಟತೆ	ರೂ.60
59.	ಜೀವನದಲ್ಲಿ ವಿಜಯ ಸಾಧಿಸಬೇಕೆಂದರೆ	ರೂ.50

▲ ಪಿರಮಿಡ್ ಧ್ಯಾನದ 18 ಆದರ್ಶ ಸೂತ್ರಗಳು ▲

1. ಸರಿಯಾದ ಧ್ಯಾನ ಎಂದರೆ ಆನಾಪಾನಸತಿ ಧ್ಯಾನ. ಇದನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು; ಆನಾಪಾನಸತಿ ಧ್ಯಾನವನ್ನು ಎಲ್ಲರಿಗೂ ಕಲಿಸಬೇಕು.
2. ಆತ್ಮವಿಜ್ಞಾನದ ಪುಸ್ತಕಗಳನ್ನು ಓದಬೇಕು, ಮತ್ತು ಇತರರೂ ಓದುವಂತೆ ತಿಳಿಸಬೇಕು.
3. ಧ್ಯಾನದಲ್ಲಿ ಆಗುವ ಅನುಭವಗಳನ್ನು ಸಹ–ಧ್ಯಾನಿಗಳೊಂದಿಗೆ ಹಂಚಿಕೊಳ್ಳಬೇಕು.
4. ಸಾಧ್ಯವಾದಷ್ಟು ಮಟ್ಟಿಗೆ ಮೌನವನ್ನು ಪಾಲಿಸಬೇಕು.
5. ಹುಣ್ಣಿಮೆಯ ರಾತ್ರಿಗಳಲ್ಲಿ ಧ್ಯಾನ ಮಾಡುವುದು ಕಡ್ಡಾಯ. ಸಾಧ್ಯವಾದಷ್ಟು ಸಾಮೂಹಿಕವಾಗಿ ಮಾಡಬೇಕು!
6. ಅವಕಾಶವಿರುವ ಕಡೆಗಳಲ್ಲೆಲ್ಲಾ ಪಿರಮಿಡ್ ಶಕ್ತಿಯನ್ನು ಹೆಚ್ಚಾಗಿ ಸದ್ಬಳಕೆ ಮಾಡಿಕೊಳ್ಳಬೇಕು!
7. ಔಷಧಿಗಳನ್ನೂ ಬಳಸದೇ ಸಾಧ್ಯವಾದಷ್ಟು ಧ್ಯಾನ ಶಕ್ತಿಯಿಂದ ರೋಗ ಗುಣಪಡಿಸಿಕೊಳ್ಳಬೇಕು.
8. ಮಾಂಸಾಹಾರ ಮುಟ್ಟಬೇಡಿ! ಕೋಳಿ ಮೊಟ್ಟೆಗಳೂ ಸಹ ನಿಷೇಧ! ಶಾಖಾಹಾರದಲ್ಲೂ ಪರಿಮಿತ ಆಹಾರವೇ ಸೂಕ್ತ.
9. ಪ್ರಕೃತಿಯೊಂದಿಗೆ ಸಹಜೀವನ ನಡೆಸುತ್ತಿರಬೇಕು.
10. ಪ್ರತ್ಯೇಕವಾದ ಆಧ್ಯಾತ್ಮಿಕ ವಸ್ತ್ರಧಾರಣೆ ಅನಗತ್ಯ.
11. ಬಾಲ್ಯದಿಂದಲೇ ಮಕ್ಕಳಿಗೆ ಧ್ಯಾನ ಶಿಕ್ಷಣವನ್ನು ಕಡ್ಡಾಯವಾಗಿ ಕಲಿಸಬೇಕು.
12. ಯಾರೂ ಶಿಷ್ಯರಾಗಿ ಇರಬಾರದು... ಎಲ್ಲರೂ ಮಾಸ್ಟರ್ಸ್ ಗಳಾಗಿಯೇ ಪ್ರಕಾಶಿಸಬೇಕು.
13. ಧ್ಯಾನ ಶಿಕ್ಷಣದ ಕಾರ್ಯಕ್ರಮಗಳಲ್ಲಿ ಹಣದ ವ್ಯವಹಾರಗಳನ್ನು (ಲಾಭದ ವಹಿವಾಟು) ಇಟ್ಟುಕೊಳ್ಳಬಾರದು.
14. ವಿಗ್ರಹಾರಾಧನೆ ಅಲ್ಲ! ಆತ್ಮ ಆರಾಧನೆಯೇ ಮುಕ್ತಿಗೆ ಮಾರ್ಗ! ಜೀವಂತವಾಗಿರುವ ಮಾಸ್ಟರ್ಸ್‌ಗಳನ್ನೂ ಸಹ ಪೂಜಿಸಬಾರದು.
15. ಸ್ವಂತ ಆತ್ಮಶಕ್ತಿಯಿಂದಲೇ... ಎಲ್ಲಾ ವೈಯಕ್ತಿಕ ಸಮಸ್ಯೆಗಳನ್ನು ಕಾಲಕಾಲಕ್ಕೆ ತಾವೇ ಪರಿಹರಿಸಿಕೊಳ್ಳುತ್ತಿರಬೇಕು.
16. ಸಾಮಾನ್ಯ ಗೃಹಸ್ಥ ಜೀವನವನ್ನು ಆನಂದವಾಗಿ ಕಳೆಯಬೇಕು.
17. ಎಲ್ಲಾ ಹಳ್ಳಿಗಳಲ್ಲೂ ಮತ್ತು ಎಲ್ಲಾ ನಗರಗಳಲ್ಲೂ ಪಿರಮಿಡ್ ಧ್ಯಾನ ಕೇಂದ್ರಗಳನ್ನು ಕಡ್ಡಾಯವಾಗಿ ಸ್ಥಾಪಿಸಬೇಕು.
18. ಧ್ಯಾನದ ಅನುಭವಗಳನ್ನೂ ಹಾಗೂ ಆಧ್ಯಾತ್ಮಿಕ ಪ್ರಗತಿಯ ವಿಶೇಷತೆಗಳನ್ನೂ ಕಡ್ಡಾಯವಾಗಿ ಬರೆದಿಟ್ಟು ಪ್ರಕಟಿಸಬೇಕು.

ಜೀವನದಲ್ಲಿ ವಿಜಯ ಸಾಧಿಸಬೇಕೆಂದರೆ ?

ನೀವು ನಿಮ್ಮ ಜೀವನದಲ್ಲಿ ವಿಜಯ ಸಾಧಿಸಬೇಕೆಂದರೆ ಕೇವಲ ಸಾಧನೆ ಒಂದೇ ಸಾಲದು, ಜ್ಞಾನವನ್ನು ಕಲಿಯಬೇಕು. ಗುರುಗಳ ಮೂಲಕ ಕೇಳಿದ ಪ್ರತಿಯೊಂದು ವಿಷಯವನ್ನು ಆಚರಣೆಯಲ್ಲಿ ತರಬೇಕು. ಆಗಲೇ ಈ ಮಾರ್ಗದಲ್ಲಿ ನೀವು ಬೆಳೆಯುವುದು ಮಾತ್ರವಲ್ಲದೆ, ಜೀವನದಲ್ಲಿ ವಿಜಯವನ್ನು ಸಾಧಿಸಲು ಸಾಧ್ಯವಾಗುತ್ತದೆ. ನಿಮ್ಮಲ್ಲಿರುವ ಈ ಲೋಪಗಳನ್ನು ಗಮನಿಸಿ ಅವುಗಳನ್ನು ಸರಿಪಡಿಸಿಕೊಳ್ಳಬೇಕು:

- "ಪ್ರತಿಕ್ಷಣವೂ ನಿಮ್ಮನ್ನು ನೀವು ಗಮನಿಸಿಕೊಳ್ಳಬೇಕು."
- "ಮನಸ್ಸಿನಲ್ಲಿ ಅಥವಾ ಜೀವನದಲ್ಲಿ ಏನೇ ಸಂಭವಿಸಿದರೂ ಅದನ್ನು ಸ್ವೀಕರಿಸಲು ಸಿದ್ಧರಿರಬೇಕು."
- "ಸೋಲು ಎಂಬುದು ಗೆಲುವಿನ ಮೊದಲ ಮೆಟ್ಟಿಲು ಎಂಬುದನ್ನು ನೆನಪಿಟ್ಟುಕೊಳ್ಳಿ. ಸೋಲಿಗೆ ಹೆದರದೆ ಮುನ್ನಡೆದರೆ ಗೆಲುವು ನಿಮ್ಮದೇ ಆಗುತ್ತದೆ."
- "ದ್ವೇಷ, ಅಸೂಯೆ, ಹಗೆ ಮತ್ತು ಪ್ರತೀಕಾರ ಎಂಬ ಗುಣಗಳು ಜೀವನದಲ್ಲಿ ಇರಬಾರದು."
- "ಭಗವಂತನು ನಮ್ಮ ಕೈಯಿಂದ ದೊಡ್ಡ ಕೆಲಸಗಳನ್ನು ಮಾಡಿಸಬೇಕೆಂದು ಅಂದುಕೊಂಡಾಗ, ಮೊದಲು ಸಣ್ಣ ಸಣ್ಣ ಕೆಲಸಗಳನ್ನು ನೀಡುತ್ತಾನೆ. ಅವು ಕೇವಲ ಸಣ್ಣ ಕೆಲಸಗಳಷ್ಟೇ ಎಂದು ನೀವು ನಿರ್ಲಕ್ಷಿಸಿದರೆ, ದೊಡ್ಡ ಕೆಲಸಗಳನ್ನು ಮಾಡುವ ಅವಕಾಶ ನಿಮಗೆ ಸಿಗುವುದಿಲ್ಲ."

– ಬ್ರಹ್ಮವಿದ್ವರಿಷ್ಠ ತಟವರ್ತಿ ರಾಜ್ಯಲಕ್ಷ್ಮಿ

ರೂ. 50/-

ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ
ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂಪರ್ಕಿಸಿ
http: //www.youtube.com/pmckannada
- www.meditationeverywhere.org
- www.pssmovement.org

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀ ರಾಮಧಾಮ ಧ್ಯಾನ ಮಂದಿರ, ನಾರಾಯಣಪ್ಪ ಗಾರ್ಡನ್
ವೈಟ್‌ಫೀಲ್ಡ್ ಬೆಂಗಳೂರು–560 066
ಸಂಪರ್ಕಿಸಿ: ಹೆಚ್.ಎನ್. ಶ್ರೀನಿವಾಸ ಮೊ. 9449695503
ವಿಜಯಲಕ್ಷ್ಮೀ ಎಸ್.ಎನ್. ಮೊ. 8050082689

ತಟವರ್ತಿ ವೀರರಾಘವರಾವ್, ರಾಜ್ಯಲಕ್ಷ್ಮೀ ಅವರ ಪುಸ್ತಕಗಳು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಈ QR Codeನ್ನು Google Lensನಲ್ಲಿ ಸ್ಕ್ಯಾನ್ ಮಾಡಿರಿ

Telugu Books | English Books | Hindi Books | Kannada Books | Tamil Books